# ಸರ್ತಾಲೆ

ಎಂ.ಜಿ. ಕಾವೇರಮ್ಮ

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ

ಸರ್ಕಾರ

# ಸರ್ಮಾಲೆ

**ಎಂ.ಜಿ. ಕಾವೇರಮ್ಮ**
"ನಿಸರ್ಗ" ಮಾವಾಜಿ
ಸುಳ್ಯ, ದಕ್ಷಿಣ ಕೊಡಗು

# ಸರ್ಮಾಲೆ

**'SARMALE'** a collection of Short Poems in Arebhase language written by M.G. Kaveramma, "Nisarga" Mavaji, Sullia, Dakshina Kannada, Published by 'Karnataka Arebhase Samskrithi Mathu Sahitya Academy'

**ಬೆಲೆ :** Price Rs. :

**ಎಲ್ಲಾ ಹಕ್ಕನ್ನು ಕಾಯ್ದಿರಿಸಲಾಗಿದೆ.**

All Rights Reserved.

**ಪ್ರಕಟಣೆ : 2015**

ಸಲಹ ಸಮಿತಿ :

**ಶ್ರೀ ಕೊಲ್ಯದ ಗಿರೀಶ್**

**ಡಾ. ಪೂವಪ್ಪ ಕಣಿಯೂರು**

**ಡಾ. ಕೋರನ ಸರಸ್ವತಿ ಪ್ರಕಾಶ್**

**ಶ್ರೀ ಮೋಹನ ಸೋನ**

**ಶ್ರೀಮತಿ ಸಂಗೀತ ರವಿರಾಜ್**

ಪ್ರಕಟಣೆ : **ರಿಜಿಸ್ಟ್ರಾರ್**

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ.

**ಪುಸ್ತಕ ದೊರೆಯುವ ಸ್ಥಳ :**

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ.

ಕಾಫಿ ಕೃಪ ಬಿಲ್ಡಿಂಗ್,

ಮಹಾತ್ಮ ಗಾಂಧಿ ರಸ್ತೆ, ಮಡಿಕೇರಿ.

ದೂ. : 08272-223075

ಮುದ್ರಣ :

**ಶ್ರೀ ಕೃಷ್ಣ ಕಂಪ್ಯೂಟರ್ಸ್ & ಪ್ರಿಂಟರ್ಸ್,** ಮಡಿಕೇರಿ.

Ph : 08272-224919, 9448135592

## ಮುನ್ನುಡಿ

ತುಂಬಾ ಪ್ರಾಯದವು, ಗೌರವಾನ್ವಿತರು ಆದ ಎಂ.ಜಿ.ಕಾವೇರಮ್ಮನವು, ನಾನ್ ಮಾಡ್ದಂತಹ ಪುಸ್ತಕ ವಿಮರ್ಶೆಗಳ ಪತ್ರಿಕೆಲಿ ಓದಿ ಅವರ ಕವಿತೆಗಳ ಬಗ್ಗೆ ನನೊಟ್ಟಿಗೆ ಬರಿಯಕೆ ಹೇಳ್ದೊ. ಜಾಸ್ತಿ ಸಂಕೋಚಲಿ ಮತ್ತೆ ಪುಸ್ತಕ ಪ್ರಟಿಸಿಕೆ ಹಂಞನೆ ದಿನ ಇರ್‍ದೊಂರ್ದ ತುಂಬಾ ವಿನಮ್ರವಾಗಿ ಅವರ ಕವಿತೆಗಳಿಗೆ ಮುನ್ನುಡಿ ಬರೆಯಮ ಅಂತ ನೆನ್ನಿಕಂಡೆ. ಮುಂದೊಂದು ದಿನ ಅರೆಭಾಷೆ ಸಾಹಿತ್ಯಕ್ಕೆ ಮನ್ನಣೆ ಸಿಕ್ಕುದು ಅಂತ ಯಾವ ಆಲೋಚನೆಸ ಇಲ್ಲದೆ ಅವರ ಪಾಡಿಗೆ ಅವು ಬರ್‍ದಿಟ್ಟ ಕವಿತೆಗಳ ನೋಡಿಕಾಕನ ಇದರ್‍ನೆಲ್ಲಾ ಪುಸ್ತಕ ಮಾಡದಿದ್ದರೆ ಅರೆಭಾಸೆ ಉಳಿಯಕೆ ಸಾಧ್ಯನೆ ಇಲ್ಲೆಂತ ಮನ್ಸ್‌ಲಿ ಆತ್. ಇದರ ಪುಸ್ತಕ ರೂಪಲಿ ತರುವ ಎಲ್ಲಾ ಜವಬ್ದಾರಿನ ಅರೆಭಾಸೆ ಸಾಹಿತ್ಯ ಅಕಾಡೆಮಿಂದ ತಕಣುವ ನಿಯಮ ಉಟ್ಟುಂತ ಆಗಲೆ ಅವ್ಕೆ ಹೇಳ್ದೆ. ಸಾಹಿತ್ಯ ಬೆಳ್ದರೆ ಮಾತ್ರ ಭಾಷೆ ಉಳಿಯಕೆ ಸಾಧ್ಯ ಅಂತ ನನ್ನ ಅಭಿಪ್ರಾಯ ಯಾಕೆಂತ ಹೇಳ್ರೆ ನಾವ್ ಉತ್ಕೃಷ್ಟ ಭಾಷೆನ ಯಾಗೋಳು ಬಳ್ಸುದು ಸಾಹಿತ್ಯಲಿ ಮಾತ್ರ. ಅರೆಭಾಸೆಲಿ ಬರ್‍ದವೆ ಅಂತಾಕನ ನಾವು ಸೂಕ್ತ ಶಬ್ದಕ್ಕೆ ತುಂಬಾ ಹುಡುಕಾಡಕ್ಕಾದೆ. ಆಗ ಮಾತ್ರ ಭಾಷೆ ಬೆಳೆಯದು ಅಂತ ನನ್ನ ಭಾವನೆ ಆದಂರ್ದ ಅರೆಭಾಸೆಲಿ ತುಂಬಾ ಸಾಹಿತ್ಯ ಕೃತಿಗ ಬರೊಕು.

ಶ್ರೀಮತಿ ಕಾವೇರಮ್ಮನವರ್‍ದು ಅನುಭವಂದ ಅದ್ದಿ ತೆಗ್ದ ಭಾರಿ ಲಾಯ್ಕದ ಕವಿತೆಗ ಇವು. ಇಲ್ಲಿರುವ ಎಲ್ಲಾ ಪದ್ಯಗಸ ಅರೆಭಾಸೆ ಗೌಡ್ರ ಮನೆಗಳಲ್ಲಿ ಮಾಡುವಂತಹ, ನಡೆಯುವಂತಹ, ಮಾತಾಡುವಂತಹ ಘಟನೆಗಳ ಸುತ್ತ ಬರ್‍ದ ನಾಜೂಕು ಪದ್ಯಗ.

ಒಂದರ್‌ಂದ ಒಂದು ಲಾಯ್ಕ್ ಮತ್ತು ಅರ್ಥಗರ್ಭಿತವಾಗಿ ಒಳೊ, ಸಾಹಿತ್ಯಲಿ ಒಂದು ಶುದ್ಧ ಅರೆಭಾಸೆನೆ ರೂಪ ಕಾಣೊಕು ಅಂತಾದರೆ ಅದಿಕ್ಕೆ ಇವರ ಕವಿತೆಗಳೆ ಸಾಕ್ಷಿ. ನಾನು ಸೇರ್ದಂಗೆ ನನ್ನ ತಲೆಮಾರ್‌ನ ಕೆಳಗಿನವೆಲ್ಲಾ ಅರೆಭಾಸೆಲಿ ಕ್ರಿಯಾಪದಗಳ ಸೇರಿಸ್ಕಂಡ್ ಲಾಯ್ಕ್ ಮಾತಾಡುವೆ ಹೊರ್ತು ಉಳ್ದಂಗೆ ಕನ್ನಡ, ಇಂಗ್ಲೀಷ್ ಶಬ್ದನ ಹೆಚ್ಚ್ ಉಪಯೋಗ್ಸುದು. ಆದರೆ ನಾವುಗೆ ಓದಿಕಾನ ಆಶ್ಚರ್ಯ ಆಗುವಂಗೆ ಇಲ್ಲಿ ಎಲ್ಲಾ ಅರೆಭಾಸೆ ಶಬ್ದಗ ಒಳ. ಅರೆಭಾಸೆಲಿ ತತ್ಸಮ ಜಾಸ್ತಿ ಬಾದು, ಕನ್ನಡಲಿ ವಿಶೇಷ (ತದ್ಭವ) ಇದ್ದರೆ ಅರೆಭಾಸೆಲಿ ವಿಸೇಸ (ತತ್ಸಮ)ಹಿಂಗೆ. ಇದರ್ನೆಲ್ಲಾ ಈಗ್‌ನ ಮಕ್ಕ ಮಾತಾಡ್ದುಲ್ಲೆ. ಆದರೆ ಇಲ್ಲಿ ಲೇಖಕಿಯವು ಅಂತ ಎಲ್ಲಾ ಪ್ರಯೋಗಗಳ ಮಾಡ್ಯೋಳ. ಞ' ಙ' ಅಕ್ಷರಗ ಬಳಕೆ ಕಡಿಮೆ. ಆದರೆ ಅರೆಭಾಸೆಲಿ ಸುಮಾರ್ ಪದಗ ಉಟ್ಟು ಹಿಂಗಿರಿಕಾನ ಅರೆಭಾಸೆಗೆ ಚರಿತ್ರೆಲಿ ಏನೊ ವಿಶೇಷ ಮಾನ್ಯತೆ ಇದ್ದ್ ಹೌದುಂತ ಗ್ಯಾರಂಟಿ ಆತಲ.

ಇಲ್ಲಿನ ಕವಿತೆಗಳ ಓದಿಕಾನ ಅವರ ಕುಟುಂಬ ಪ್ರೀತಿನು ಎದ್ದ್ ಕಂಡದೆ ಅವರ ಉಗ್ಗವ್ವ, ಅಜ್ಜಪ್ಪ, ಅವ್ವ,ಅತ್ತಿಗೆ, ತಮ್ಮ ಎಲ್ಲರ ನೆನ್ಪುನಸ ಕವಿತೆಲಿ ಕಟ್ಯೊಳೊ. ಉಗ್ಗವ್ವ ಕವಿತೆನ ಓದಿಕಾಕನ ಈಗದ್ದ್ ಒಂದ್ ಕಾಲನ ಅಂತ ಅನ್ಸಿಬುಟ್ಟದೆ. ಅದ್ ಉಗ್ಗವ್ವನ ಕವಿತೆನು ಹೌದು; ಬದಲಾದ ಕಾಲದ ಬಗ್ಗೆನು ಹೌದು. ಅದರ ಗೆರೆಗಳ ನೋಡಿ

ಒಗ್ಯಾಕೆ ನರುವೊಳು, ಮೀಯಕೆ ಸೀಗೆ
ಸಾಬಾನ್ ಅದಿಕ್ಕೆ ಬೇಕಿಲ್ಲೆ
ಬೆಣ್ಣೆಕರ್ತೆ ಸೊಪ್ಪುಲಿ, ಒಡ್ಯೆನ ಮಾಡಿ
ತಲೆನ ಪೊರ್ಲುಲಿ ತೊಳಿತ್ತಿತ್ತ್

ಇಲ್ಲಿನ ಜಾಸ್ತಿ ಕವಿತೆಗಪ್ರಾಸಪದಲಿ ಇರುವಂತದ್ದ್ ಓದಿಕಾನ

ಎಷ್ಟ್ ಖುಷಿ ಆದೆಂತ ಓದವ್ಕೆ ಗೊತ್ತು "ನೆಂಟಾರ ಹೆಸ್ರೇಳಿ ಎಲ್ಲವು ಉಂಡೋ" ಕವಿತೆಲಿ–

"ಅಜ್ಜಪ್ಪ ಮಾಸಾನಾ ಸೊಸೆ ಕೈಲಿ ಕೊಟ್ಟೋ
ಹುಳಿ ಮೆಣ್ಸ್ ಕಡ್ದ್ ಕೊದ್ಯಕ್ಕೆ ಇಟ್ಟೊ
ಕಾಯಿನ ಹಾಲ್‌ನ ಆಮ್ರಕ್ಕೆ ತೆಗ್ದೊ
ಅಕ್ಕಿನ ಕಡ್ದ್ದ್ ರೊಟ್ಟಿನು ತಟ್ಟಿದೋ"

'ಉಗ್ಗವ್ವ' ಕವಿತೆಲಿ– "ಬೆಳ್ಳಿ ಕೂದಲ್ ಸೂಡಿನ ಕಟ್ಟಿತ್ತ್
ಚಿನ್ನದ ಓಲೆ ಕೆಬಿಲಿತ್ತ್
ಕರಿಮಣಿ ತಾಳಿಲಿ ಹವಳ ಎರಡಿತ್ತ್
ಬೆಳ್ಳಿನ ಕಡಗ ಕೈಲಿತ್ತ್.

ಇನ್ನೊಂದು ಕಾರ್ಯಕ್ರಮಕ್ಕೆ ಹೋಗಿ ಬರ್ದ ಪದ್ಯದ ಸಾಲ್–

ತಿಂಬಂಕೆ ಉಟ್ಟು
ಕೋಳಿಗೈಪು ಹುಗ್ಗೆ
ತಿನ್ನದವ್ಕೆ ಉಟ್ಟು
ಬದಾನೆ–ನುಗ್ಗೆ

ಈ ಪ್ರಾಸಪದಗಳ ರುಚಿ ಓದಿಕು ಮತ್ತು ಬರಿಯಕೆ ಹಿಡ್ದು ಬುಟ್ಟರೆ ಮತ್ತೆ ಬುಡಿಕೆ ಸಾಧ್ಯ ಆದ್ಲೆ. ಇದರ ಗುಣನೆ ಅಂತದ್ದ್. ನಾವು ಕನ್ನಡಲಿ ಬರೆವಂತ ನವ್ಯ ಕವಿತೆಗಳಂಗೆ ಅರೆಭಾಸೆಲಿ ಬರಿಯಕೆ ಕಷ್ಟ ಸಾಧ್ಯ ಅಂತ ನನ್ನ ಭಾವನೆ. ಹಿಂಗೆ ನವಿರಾಗಿ ರಾಗ ಹಾಕುವ ದಾಟಿಲಿ ಪ್ರಾಸದೊಂದಿಗೆ ಬರ್ದರೆ ಅರೆಭಾಸೆಲಿ ಒಳ್ಳೆ ಸಾಹಿತ್ಯ ಸೃಷ್ಟಿ ಆದೆ. ಇಲ್ಲಿರುವ

ಕವಿತೆಗಳ್ಲಿ ಎಲ್ಲಿಸ ವಾಚ್ಯಕ್ಕೆ ಜಾಗನೆ ಇಲ್ಲದೆ ರಾಗ ಹಾಕಿ ಹಾಡಿಕೆ ಸಲೀಸಾಗಿ ಉಟ್ಟು 'ಅಕ್ಕನ ಮನೆ' ಕವಿತೆಲಿ–

“ಸೋದರ ಮಾಂವನ ಮಂಜಂಗೆ ನನ್ನ
ಅಕ್ಕನ ಕೊಟ್ಟತ್ತ್
ಮದುವೆ ಆಕನ ಕಿಟ್ಟು ಭಾವಂಗೆ
ಸಣ್ಣ ಜುಟ್ಟಿತ್ತ್
ಮನೆಗೆ ಬಾಕನ ಜುಟ್ಟುನ ಬಿಚ್ಚಿ
ಬೆಳ್ಚಿಲ್ ಮಾಡ್ತಿದ್ದೆ.

ಹಿಂಗೆ ಸಾಗುವ ಈ ಪದ್ಯನ ಓದಿಕಾನ ರಾಗ ತನ್ನಿಂದ ತಾನೆ ಬಂದಂಗೆ ಆದೆ. ಇಂತ ಕವಿತೆಗಳ ಓದಿಕೆ ಬಾಳಾ ಸುಲಭ ಅಂತ ಆದ್ರು ಬರಿಯಕೆ ಬಾಳಾ ಕಷ್ಟ.

ಇನ್ನೊಂದು ಸ್ವಾಗತ ಗೀತೆ:–

ಹತ್ತು ಕುಟುಂಬದ ಹದ್ನೆಂಟ್ ಗೋತ್ರಾದ
ನೆಂಟ್ರೆಲ್ಲಾ ಬನ್ನಿ ಕೈ ಮುಗ್ದ್ ಕರ್ದವೆ
ನೀರೂನು ಕೊಟ್ಟವೆ, ಮೋಂದ್ರಿನು ಹಾಕುವೆ
ಬೇಕಾರೆ ಕುದ್ರಿಕೆ ಕುರ್ಚಿನು ಉಟ್ಟು ||ಸ್ವಾಗತ||

ಇನ್ನುಳ್ದಂಗೆ ಪ್ರಾರ್ಥನೆ, ಗೌಡ ಘಟಕದ ಉದ್ಘಾಟನೆಗೆ ಬರ್ದ ಕವಿತೆ, ಪಚಾರ, ಪಂಡ್‌ನ ಕಾಲ, ಆಟಿ ಕಳಂಜ, ಗೂಡೆನ ಮದ್ವೆ, ಪಾರಿಜಾತ, ನಂಗೂನು ಬಳೆನಾ ಇಸೊಕವ್ವ, ಬಾನಜ್ಜ ಗುಡ್ಸಿದೆ, ಈ ಕವಿತೆಗಳಿಗೆಲ್ಲಾ ಸರಾಗಲಿ ರಾಗ ಹಾಕಕ್.

ಕಳ್ದುಹೋದ ಕಾಲನ ನೆನ್ಸಿ ಆಗುವ ಮರುಕ ಲೇಖಕಿ ಯವ್ಕೆ ಎಲ್ಲಾ ಕವಿತೆನ ಮೂಲಕ ಹೊರಹೊಮ್ಮಿಟು. ಇಂದ್‌ನ ತಲೆಮಾರುನವು ಅರೆಭಾಸೆನ ಮತ್ತು ಗೌಡ್ರ ಸಂಪ್ರದಾಯಗಳ

ಗಂಧ ಗಾಳಿನೆ ಇಲ್ಲದೆ ಬೆಳಿತ ಒಳೊ ಎಂಬ ನೋವು ಅವ್ಕೆ ಉಟ್ಟು. ನಮ್ಮ ಅರೆಭಾಸೆನ ಮುಂದಿನ ತಲೆಮಾರಿಗೆ ದಾಟುಸುವಲ್ಲಿ ಇರುವ ಅವರ ಯೋಚನೆಗೆಗ ಹೆಚ್ಚಿನ ಕವಿತೆಗಳ ಅಂತರಾಳ, 'ತಮ್ಮನ ಚಾರ ಕವಿತೆ' ಹಿಂಗುಟ್ಟು-

ತಿಂಗಳಿಗೊಮ್ಮೆ ಚೌರಿಜ ಬಂದದೆ
ಮಕ್ಕಳ ತಲೆಗೊದ್ಲ ಕತ್ರಿಸಿ ತೆಗ್ದದೆ
ಕಚ ಕಚ ಸದ್ದು ಮಾಡಿ ಕತ್ರಿನಾ ಓಡ್ಸಿದೆ
ಹಿಂದೊಮ್ಮೆ ಮುಂದೊಮ್ಮೆ ತಲೆನ ಅಲ್ಲಾಡ್ಸಿದೆ.

'ಬೊಳ್ಪುನ ಕೆಲ್ಸ' ಕವಿತೆಲಿ- ಅಡ್ಗೆರದ ತೆಳಿನ ಮುರ್ಗಿಲಿಗೆ ಹೊಯ್ದು

ದನಂಗಳ ಕರ್ದ್ ಕುಡ್ಯಾಕೆ ಕೊಟ್ಟ್
ಕರ್‌ಬುಡ್ವ ದನಕ್ಕೆ ಮೊಡ್ಡಿನ ತಿನ್ನಿ
ಕಂಚಿಳ್‌ಲಿ ಇದ್ದ ಕರ್ಗಳ ಬುಟ್ಟತ್ತ್
ಮಜ್ಜಿಗೆ ಕಡ್ಯಕಂತ ಮೊಂತುನ ತಂದ್

'ಬ್ರಹ್ಮಗಂಟ್' ಕವಿತೆಲಿ :

ಬೊಳ್ಪುಗೆ ಹೊರ್ಟವು ಹಿಂಬೊತ್ತು ಆಕನ
ಹೇಂಗಾರ ಮಾಡಿ ಮುಟ್ಟಿದೊ ಅತ್ತೆ ಮನೆನ
ನಂಗೂನು ಬಳೆನಾ ಇಸೊಕವ್ವ, ಕವಿತೆಲಿ,
"ಕಟ್ಟದ ಪುಣಿಲಿ ಬಳೆಗಾರ್ತಿ ಬಂದವೆ
ನಂಗೂ ಬಳೆನಾ ಇಸೊಕವ್ವ.

ಈ ಕವಿತೆಗಳಲ್ಲಿ ಬರುವ ಚೌರಿಜ ಮನೆಗೆ ಬಾದು ಎಲ್ಲಿಟ್ಟು? ಮಜ್ಜಿಗೆ ಕಡೆವ ಮೊಂತು ಎಲ್ಲಿಟ್ಟು? ಮದ್ವೆಗೆ ದಿಬ್ಬಣ ನಡ್ಕಂಡ್ ಹೋದು ಎಲ್ಲಿಟ್ಟು? ಕಟ್ಟಪುಣಿಲಿ ಬಳೆಗಾರ್ತಿ ಯಾಗ ಬಂದದೆನೋ? ಇಂತದ್ದೆಲ್ಲಾ ಈಗ ಯಾವ್ದು ಇಲ್ಲದರ ಕವಿತೆಗಳ್ಲಿ

ಹೇಳ್ಯೊಳನ ಅದುವೆ ಅರೆಭಾಸೆನ ಜೀವಾಳ. ಈಗ್‌ನ ಮಕ್ಕ ಆಚರಣೆಗೆ ತರದಿದ್ರು ಓದಿ ಗೊತ್ತಿರಲಿ ಎಂಬ ಭಾವನೆ ಸಫಲ ಆಕುಂತ ಲೇಖಕಿಯವ್ಕೆ ಆಸೆ.

'ನವ್ಯ ಕವಿತೆಗಳ್ನೆ ಬರೆವ ಪ್ರಸ್ತುತ ಕಾಲಘಟ್ಟಲ್ಲಿ ಇವರ ಕವಿತೆಗ ಅರೆಭಾಸೆಗೆ ಬಲುಸೂಕ್ತವಾಗಿ ಹೊಂದಿಕಂಡದೆ. ಉಪಮೆಗ ಇಲ್ಲದ ಕವಿತೆಗ ದುರ್ಬಲವಾಗಿ ಬುಡುವ ಬದ್ಕುವ ಸಾಧ್ಯತೆನೆ ಹೆಚ್ಚು. ಆದರೆ ಇಲ್ಲಿನ ಕವಿತೆಗಳ ಉಪಮೆಗಳ ನೋಡಿಕಾನ ಅವರ ಕವಿ ಮನಸ್ಸ್‌ನ ಆಳ ನಮ್ಮ ಬೆರಗುಗೊಳಿಸಿದೆ "ಮುಳುಗುವ ಸೂರ್ಯ" ಕವಿತೆಲಿ–

ಹಿಂಬೊತ್ತು ಆಕನ ಪೊಡ್ವ ದಿಕ್ಕ್‌ಲಿ
ಮುಳುಂಗುವ ಸೂರ್ಯನ ನಾ ಕಂಡೆ
ಕಂಕ್‌ಣಿ ಹಾಕಿದ ಕಂಚಿನ ಬಟ್ಟಲ್‌ದ್
ಚಿನ್ನದ ಹಾಂಗೆ ಹೊಳಿತ್ತಿತ್ತ್.

ಸೂರ್ಯ 'ಕಂಕ್‌ಣಿ ಹಾಕಿದ ಚಿನ್ನದ ಬಟ್ಲಂಗೆ ಹೊಳಿತ್ತಿತ್ತ್ 'ಎನ್ನುವ ಹೋಲಿಕೆ ಎಷ್ಟೊಂದು ಸೊಗಸಾಗಿಟ್ಟು ! ಇದೇ ಕವನಲಿ "ಕಂತುವ ಸೂರ್ಯನ ಪೊರ್ಲುನ ನೋಡಿಕೆ ಇನ್ನೆರ್‌ಡ್ ಕಣ್ಣ್ ಬೇಕಾಗಿತ್ತ್ " ಸಾಲ್‌ನ ನೋಡಿಕಾನ ಆ ಸೂರ್ಯ ಮುಳುಗುವ ದೃಶ್ಯ ಎಂಥ ಮನಮೋಹಕ ಎಂಬುದರ ಕೇವಲ 'ಇನ್ನೆರ್‌ಡ್ ಕಣ್ಣ್ ಬೇಕಾಗಿತ್ತ್' ಅಷ್ಟರಲ್ಲೆ ಹೇಳಿ ಮುಗ್ಸಿದ್ ಕವಯತ್ರಿಯ ಜಾಣ್ಮೆನ ಸೂಚಿಸಿದೆ. ಅರೆಭಾಸೆ ಮಾತಾಡುವವರ ಜೀವನ ಶೈಲಿಗೆ ಹೇಳಿ ಮಾಡ್ಸಿದ ಕವಿತೆಗಳಾದ 'ಬಾಳೆ ಕುರ್ಲೆ', 'ಉಪ್ಪಣ', 'ಕರ್ ಮೊಲೆ ಉಂಡತ್' 'ಚಂಗುಳಿ', 'ಸರ್ಮಾಲೆ ದೀಪ', 'ಬೀಜದ ಕೊಟ್ಟಲಿ', 'ಕೂಸುನ ಬಂಜ', ತುಂಬಾ ಸೊಗಸಾಗಿ ಮೂಡಿ ಬಂದುಟು ಸಂಕಲನಕ್ಕೆ ಇಸಿದ ಹೆಸರು

# ಸರ‍್ಮಾಲೆ

ಸರ‍್ಮಾಲೆ ಎಂಬುದು ಸರ‍್ಮಾಲೆ ದೀಪ ನಾವು ತೂಗುದೀಪ ಅಂತನು ಹೇಳ್ವೆ. ಹಿಂದ್‌ನ ಕಾಲಲಿ ಸರ‍್ಮಾಲೆಯನ್ನು ಇಲ್ಲದ ಮನೆಗಳೆ ಇತ್ಲೆ. ಬೆಳಗುವ ದೀಪದ ಈ ಹೆಸ್ರ್ ಅದ್ ಅತ್ಯಂತ ಆಯ್ಕೆನೆ ಆಗಿಟ್ಟು ದೀಪದಂತೆ ಬೆಳಗುವ ಇಲ್ಲಿನ ಕವಿತೆಗ ಎಲ್ಲ ಕಡೆನು ಪಸರಿಸಿದೆ ಎಂಬ ವಿಶ್ವಾಸ ನಂಗುಟ್ಟು.

ಇಲ್ಲಿನ ಕವನಗಳ ಸುಂದರ ಭಾಷೆಲಿ ಮಹಿಳೆಯೊಬ್ಬರ ಅಂತ ರಂಗ ಸೂಕ್ಷ್ಮವಾಗಿ ತೆರ‍್ಕಂಡ ಹಾಂಗೆ ಆಗಿಟ್ಟು. ವಸ್ತು ನಿಷ್ಠ ವಸ್ತುಗಳ ಇಲ್ಲಿನ ಕಾವ್ಯಗ ಪರಿಣಾಮಕಾರಿಯಾಗಿ ನಮ್ಮ ತಟ್ಟಿದೆ, ಮತ್ತು ಎಲ್ಲಾ ಕವನಗಳ ಪ್ರಸ್ತುತ ಪಡ್ಸಿದ ರೀತಿ ವಿಶೇಷವಾಗಿಟ್ಟು ಅರೆಬಾಸೆಲಿ ಇಷ್ಟ್ ಶಬ್ದ ಭಂಡಾರದ ಲಾಲಿತ್ಯ ನೋಡಿ ಇನ್ನು ಮುಂದೆ ಓದವ್ಕೆ ಅನುಕೂಲ ಆದೆಂಬ ಖುಸಿನು ಆತ್. ಪ್ರಾಯ ಆದ ಮೇಲೆ ಮಕ್ಕಳಂಗೆ ಮನ್ಸ್ ಅಂತ ಒಂದು ಮಾತುಟ್ಟು. ಇಂತ ಮಕ್ಕಳಂತ ಮನಸ್ಸ್‌ನ ಕಾವೇರಮ್ಮನವು ಇಳಿಪ್ರಾಯಲಿಸ ಇಸಿಕಂಡ ಜೀವನೋತ್ಸಾಹ ನೋಡಿ ನಾವೆಲ್ಲ ಕಲಿಯುಕು. ಇವರ‍್ದ್ ಬತ್ತದ ಉತ್ಸಾಹ ಅಂತ ಹೇಳ್ರ್ ಅತಿಶಯೋಕ್ತಿ ಆಕಿಲೆ. ಅರೆಬಾಸೆಲಿ ಇಷ್ಟೊಳ್ಳೆ ಲವಲವಿಕೆನ ಪದ್ಯ, ಸಾಹಿತ್ಯದ ಭಂಡಾರನ ಒದಗಿಸಿದ ಕಾವೇರಮ್ಮನವ್ಕೆ ಎಷ್ಟು ಧನ್ಯವಾದ ಹೆಳ್ರ್ ಸಾಲ್ದುಲೆ. ಅರೆಬಾಸೆಲಿ ಇವರ ಕೃತಿಗ ಇನ್ನುಸ ಮೂಡಿ ಬರ‍್ಲಿ ಮತ್ತು ಈ ಪುಸ್ತಕ ಅವ್ಕೆ ಸೂಕ್ತ ಮನ್ನಣೆ ತಂದ್ ಕೊಡ್ಲಿ ಅಂತ ಆಶಿಸಿನೆ.

**ಸಂಗೀತ ರವಿರಾಜ್**

ಹೊಸೂರು.

ತಾರೀಕ್ :

# ಸರ್ಕಾರಿ

# ಅಧ್ಯಕ್ಷರ ಮಾತ್

ಅರೆಭಾಷಿಕರ ಬಾಳ ದಿನದ ಕನಸ್ ಆಗಿದ್ದ ಅಕಾಡೆಮಿ ಆಕ್ರಿಗೂ ಕರ್ನಾಟಕ ಘನ ಸರಕಾರ ಮಾನ್ಯತೆ ಮಾಡಿ ಅರೆಭಾಷೆ ಸಂಸ್ಕೃತಿ ಸಾಹಿತ್ಯ ಅಕಾಡೆಮಿನ ಸ್ಥಾಪನೆ ಮಾಡಿಯೊಳೊ.

ಅರೆಬಾಸೆ ಸಂಸ್ಕೃತಿ ಸಾಹಿತ್ಯ ಜಾನಪದನ ಉಳಿಸಿ ಬೆಳ್ಸಿಕೆ ಸರಕಾರ ಸಮಿತಿ ರಚನೆ ಮಾಡಿಯೊಳೊ. ಅರೆಬಾಸೆಲಿ ಪುಸ್ತಕ ಬಾಳ ಕಮ್ಮಿಯಿದ್ದ್ ಅಕಾಡೆಮಿ ಅರೆಬಾಸೆ ಪುಸ್ತಕ ಪ್ರಕಟಣೆಗೆ ಆದ್ಯತೆ ಕೊಟ್ಟದೆ. ಈ ಒಂದ್ ಅವಕಾಸನ ಬಳ್ಸಿಕಂಡ್ ಲೇಖಕರ್ ಅರೆಬಾಸೆಲಿ ಕಥೆ, ಕವನ ಅನುವಾದ ಕತೆಗ ಸಂಸ್ಕೃತಿಗೆ ಸಂಬಂದಪಟ್ಟ ಲೇಖನಗಳ್ನ ಬರೆಯೂಕೂತ ಮನವಿ ಮಾಡ್ತಾವೊಳೆ.

ಸುರೂಲಿ ಐದ್ ಪುಸ್ತಕಗಳ್ನ ಪ್ರಕಟಣೆ ಮಾಡಿಕೆ ನಮ್ಮ ಸಮಿತಿ ತೀರ್ಮಾನ ಮಾಡಿಯೊಳೊ, ಪುಸ್ತಕ ಬರ್ದ ಎಲ್ಲಾ ಲೇಖಕರಿಗೂ ನನ್ನ ಹೃತ್ಪೂರ್ವಕ ಅಭಿನಂದನೆನ ತಿಳಿಸ್ತಾವೊಳೆ. ಬರ್ದ ಎಲ್ಲಾ ಪುಸ್ತಕ ಶ್ರೇಷ್ಠ ಅಂತ ನಾನ್ ಹೇಳ್ದೂಲೆ. ಲೇಖಕರ್ ಅವರ ಸೃಜನಶೀಲತೆನ ಈ ಲೇಖನಲಿ ತೋರ್ಸೊಳೊ. ಹಂಗೆ ಎಲ್ಲಾ ಪ್ರಕಾರಗಳ್ಲಿ ಅವರ ಸಾಮರ್ಥ್ಯನ ಓರಗೆ ಹಚ್ಚಿಯೊಳೊ.

ಈ ನಿಟ್ಟ್‌ಲಿ ಹಿರಿಯವು ಆದ ಶ್ರೀಮತಿ ಎಂ.ಜಿ. ಕಾವೇರಮ್ಮ ನವು "ಸರ್ಮಾಲೆ" ಕವನ ಸಂಕಲನ ಬರ್ದೊಳೊ. ಲೇಖಕಿಯವೂ ತಮ್ಮ ದೈನಂದಿನ ಜೀವನಲಿ ಆದ ಅನುಭವಗಳ್ನ, ನಮ್ಮ ಆಚಾರ ವಿಚಾರಗಳ್ನ, ಸುತ್ತ ಮುತ್ತ ನಡೆವ ಘಟನೆಗಳ್ನ ಕವನ ರೂಪಲಿ ಹೊರ ತಂದೊಳೊ. ಈ ಕವನ ಸಂಕಲನ ಮುದ್ರಣ ಕಾರ್ಯಕ್ಕೆ ಸಹಾಯ ಮಾಡ್ದ ಡಾ. ಪೂವಪ್ಪ ಕಣಿಯೂರ್‌ಯವ್ಕ ಮತ್ತೆ ಪುಸ್ತಕ ಸಮಿತಿಯವ್ಕ ಅಕಾಡೆಮಿ ಸದಸ್ಯರಿಗೂ ನನ್ನ ಪ್ರೀತಿಯ ಕೃತಜ್ಞತೆನ ಸಲ್ಲಿಸ್ತಾವೊಳೆ.

**ಶ್ರೀ ಕೊಲ್ಯದ ಗಿರೀಶ್**
ಅಧ್ಯಕ್ಷರ್

# ಹೋಿಸಿದ ನೆಣೆಗ

1. ಪಚಾರ
2. ನೆಂಪು
3. ನೆಂಟಾರ ಹೆಸ್ರೇಳಿ ಎಲ್ಲೋವು ಉಂಡೊ
4. ಪಂಡ್‌ನ ಕಾಲ
5. ಆಟಿಕಳಂಜ
6. ಬೊಳ್ಸನ ಕೆಲ್ಸ
7. ಉಗ್ಗವ್ವ
8. ಅಜ್ಜಪ್ಪ
9. ಗದ್ದಳ
10. ಯಾವ್ದರ ತಿಂಬೊದು ಯಾವ್ದರ ಬೂಡ್ದು.
11. ಸೂಂತೋಡು ಸೊಸೆ
12. ತಮ್ಮನ ಚೌರ
13. ನಂಬಾಸೆ
14. ನಂಗೂನೂ ಬಳೆನ ಇಸೊಕವ್ವಾ
15. ಗೂಡೆನ ಮೊದ್ವೆ
16. ಗೌಡರ ಸುಳ್ಯ ನಗರ ಘಟಕದ ಉದ್ಘಾಟನೆ ಪದ
17. ಪ್ರಾರ್ಥನೆ
18. ಬಾನಜ್ಜ ಗುಡ್ಗೀತ್
19. ಸ್ವಾಗತ ಗೀತೆ
20. ಆಸೆ ನೀರಾತ್

ಸರ್ಮಾಲೆ

21. ಬೊಳ್ವನ ತಿರ್ಗಾಟ
22. ಬ್ರಹ್ಮಗಂಟ್
23. ಅಕ್ಕನ ಮನೆ
24. ಆಟಿ ಹಬ್ಬ
25. ಹಡ್ಡೆ ನಾಯಿ
26. ಗೌಡ್ರ ಹೆಣ್ಮಕ್ಕ ನಾವು
27. ಚಂಗುಳಿ
28. ಐಯ್ಯನ ಬಂಡೆ ಯಾರ್ನ ಕರ್ರ್ಯೋದು
29. ಜೀವನ ಹೇಂಗೂ ಸಾಗ್ತಿತ್ತ್
30. ಬಾಳೆ ಕುರ್ಲೆ
31. ಉಪ್ಪಣ
32. ಮುಳುಂಗುವ ಸೂರ್ಯ
33. ಸುಳ್ಯ ಜಾತ್ರೆ
34. ಕಟ್ಟಕೆ ಹೊರ್ಟ ಅತ್ತಿಗೆ
35. ಪಾರಿಜಾತ
36. ಕರ್ ಮೊಲೆ ಉಂಡತ್
37. ಅರೆಭಾಷೆ
38. ಕೂಸೂನ ಬಂಜ ಕೂಸು
39. ಮಲ್ಲಿಗೆ ಹೂವು
40. ಬೀಜದ ಕೊಚ್ಚೇಲಿ
41. ತಾವರೆ ಹೂಗ
42. ಸರ್ಮಾಲೆ

# ನನ್ನೆರ್‍ಡ್ ಮಾತ್‌ಗ

ನನ್ನ ಈ ಸರ್ಮಾಲೆಲಿ ನಲ್ವತ್ತೆರ್‍ಡ್ ನೆಣೆಗಳ ಹೋಸಿ, ಓದೋವ್ಕೆ ಬೊಳ್ವು ಕೊಟ್ಟಳೆ. ಇದರ್‍ಲಿ ಹಂಞ ನೆಣೆಗ ಎಣ್ಣೆ ಕಮ್ಮಿ ಆಗಿ ಬೊಳ್ಪು ಕಮ್ಮಿ ಆಗಿರ್ದು. ಇದರ್‍ಲಿ ಅಕೆರಿನ ಹದಿನೇಳ್ ಪದಗಳ ನಾ ಅಂಬೆರ್ಪೂಲಿ ಬರ್‍ದೆ. ನಾ ಸುರುಗೆ ಕೊಟ್ಟ ಇಪ್ಪತ್ತೈದ್ ಪದಗಳ ಓದಿ, ಲಾಯ್ಕಟ್ಟು, ಇದರ ಒಂದು ಪುಸ್ತಕ ಮಾಡಿಕೆ ಇನ್ನೂ ಹಂಞ ಪದಗಳ ಬರ್‍ಯೆನೀಂತ ಅರೆಭಾಷೆ ಅಕಾಡೆಮಿಯೊವು ಹೇಳ್ಯೊಳೋಂತ, ಅವರ ಒತ್ತಾಸೆಂದ ಉಳ್ದ ಹದಿನೇಳರ ಬರ್‍ದೆ. ಅದೂ ಅಲ್ಲದೆ ನನ್ನ ಈ ಪದಗಳ ಸಂಕಲನ ಓದಿಕೆ ಯಶವಂತ ಕುಡೆಕಲ್ಲ್ ಇವು ತಕೊಂಡೋಳೋಂತ ಗೊತ್ತಾತ್. ಅವು ಅರೆಭಾಷೆ ಪದಗಳ ತುಂಬಾ ಬರ್‍ದ್, ಪುಸ್ತಕ ಬಿಡುಗಡೆ ಮಾಡ್ದೊವು. ಅವ್ಕೆ ನಾ ಫೋನ್ ಮಾಡಿ ನನ್ನ ಪದಗಳ ಬಗ್ಗೆ ಕೇಳ್ದೆ. ಅವುನೂ, ನೀವ್ಗೆ ಅರೆಭಾಷೆಲಿ ಹಿಡ್ತ ಉಟ್ಟು. ಬರ್‍ಯೊದರ ನಿಲ್ಸ್‌ಬೊಡೀಂತ ನಂಗೆ ಪ್ರೋತ್ಸಾಹ ಕೊಟ್ಟೊ. ಅರೆಭಾಷೆ ಅಕಾಡೆಮಿನ ಸದಸ್ಯರಾದ ಅವ್ಕುನೂ ಈ ಸಂದರ್ಭಲಿ ನಾ ನನ್ನ ಕೃತಜ್ಞತೆನ ಅರ್ಪಿಸಿನೆ.

ಭವಾನಿ ಶಂಕರ ಹೊದ್ದೆಟ್ಟಿ, ಯಶವಂತ ಕುಡೆಕಲ್ಲು ಇವರ ಅರೆಭಾಷೆ ಪದಗಳ ಓದಿಕಾಕನ ನಂಗೆ ತುಂಬಾ ಕುಸಿ ಆಗ್ತಿತ್ತ್. ನಾ ಅರೆಭಾಷೆ ಪದಗಳ ಬರ್‍ದನೇಂತ ಆಗ ನಂಗೆ ಗೊತ್ತೇ ಇತ್ಲೆ. ಒಮ್ಮೆ ನಾ ನನ್ನ ಅಣ್ಣನ ಮಗ ಶೀಲನಲ್ಲಿ ಹೋಕಾಕನ ಅರೆಭಾಷೆಲಿ ಒಂದ್ ಹಾಡ್ ಹೇಳ್ತ್. ಅದ್ ಹಾಡ್‌ಕನ ನಂಗುನೂ ಬರ್‍ಯೊಕೂಂತ ಆಸೆ ಆತ್. ಹೇಂಗೆ ಸುರುಮಾಡ್ದೂಂತ ಯೋಚಿಸಿಕನ ನಂಗೆ ಸುರುಗೆ ನೆಂಪಿಗೆ ಬಂದ ಸಾಲ್, "ಮೊದೊಳ್ಗೆ ಗೂಡೆ ಭಾರಿ ಪೊರ್‍ಲು ಕಾಂಬತಿತ್ತ್" ಈ ಸಾಲ್‌ನ ಹಿಡ್ಕಂಡ್ ಪದ ಬರ್‍ಯಕೆ ಸುರು ಮಾಡ್ದೆ. ಒಂದರ ಹಿಂದೆ ಒಂದು ಬರ್‍ದೆ. ಹಿಂದೆ, ಮುಂದೆ ಸೇರ್‍ಸಿದೆ. ನೋಡಿಕನ ಒಂದು ಪೊರ್‍ಲುನ ಪದ ಆತ್. ಅದೇ "ಪಚಾರ" ನನ್ನ ಸುರುನ ಅರೆಭಾಷೆ ಪದ. ಒಂದು ದಿನ ನನ್ನ ಎರಡ್ನೆ ಮಗಳ್ ಅನುಪಮ ಕುದ್ವ–ಇದರ ಮನೆಲಿ ಇರಿಕಾಕನ, ಕೆಲ್ಸದವ್ಕಾಗಿ ಮಾಡ್ದ ಅಡ್ಗೆನೆಲ್ಲಾ, ಅವು ಬಾತಿಲ್ಲೆಂತ ದನಗಳಿಗೆ ಹಾಕಿತ್.

ನಾಳೆನ ಸಂಬಳನ ಇಂದೆ ತಕಂಡ್ ಹೋದೋವು, ಕೈಕೊಟ್ಟೋಂತ ಅದ್ ಪರಿಂಚಿಗೆ ಸುರುಮಾಡ್ತ್. ಆಗ ನಂಗೆ ಹೊಳ್ದ್ ಬರ್ದ ಪದ "ನೆಂಪು" ಕಡೆಗೆ ನಂಗಾತ್ ನಮ್ಮ ಭಾಷೆಲಿ ಬೇಕಾದಷ್ಟ್ ಹಳೆ ಪದಗ ಒಳೊ. ಇದರೆಲ್ಲಾ ನಾ ಬರ್ಯೊವ ಪದಗಲ್ಲಿ ತರೊಕೂಂತ ಯೋಚನೆ ಮಾಡ್ದೆ. ಆಗ "ಕೋಳಿ ಕಾಂಕ್ರ್‌ಸಿತ್" ಎಂಬ ಪದನ ಹಿಡ್ಕಂಡ್ "ನೆಂಟಾರ ಹೆಸ್ರೇಳಿ ಎಲ್ಲೋವು ಉಂಡೊ", "ಮರ್ಚಟ್ಟೆ-ಕುರ್ಚಟ್ಟೆ" ಪದಗಳ ನೆಂಪಿಗೆ "ಪಂಡ್‌ನ ಕಾಲ" ಹಾಡ್‌ನ ಬರ್ದೆ. ಅಡ್ಗೆರಮರ್ಗಿಲ್ ಪದಗಳಿಗಾಗಿ "ಬೊಳ್ವುನ ಕೆಲ್ಸ" ಪದ ಬರ್ದೆ. ಹೀಂಗೆ ನನ್ನ ಅರೆಭಾಷೆನ ಕೃಷಿ ಮುಂದೆ ಸಾಗಿತ್. ಆ ಮೇಲೆ ಬರ್ಯೋದು ಸುಲಭ ಆತ್. ಮನ್ಸ್‌ಗೆ ಕುಸಿನೂ ಕೊಟ್ಟತ್. ಸಿಕ್ಕಿದರ ಮೇಲೆಲ್ಲಾ ಪದಗಳ ಬರ್ದೆ. ಅಜ್ಜಪ್ಪ, ಉಗ್ಗವ, ಅತ್ತಿಗೆ, ಆಟಿಕಳಂಜ, ನಂಭಾಸೆ-ಹೀಂಗೆ ಒಂದರ ಹಿಂದೆ ಒಂದು ಬರ್ದೆ. ನಾ ಬರ್ದ ಪದಗಳ ಎಲ್ಲಾ ಹಾಡಿಕೆ ಆಗುವ ತರಲೇ ಬರ್ದಳೆ. ಗೌಡರ ಸುಳ್ಯ ನಗರ ಘಟಕದ ಸ್ನೇಹ ಸಮ್ಮೇಳನ ಕೊಡಿಯಾಲ ಬೈಲಿಲಿ ನಡ್ಯಕಾಕನ ನಾ ಬರ್ದ ಉದ್ಘಾಟನಾ ಪದ, ಮೂಲೆಮಜಲ್ ಲಕ್ಷ್ಮಿಕಾಂತ ಬಳಗದೊವು ಹಾಡಿ, ಎಲ್ಲರ್‌ಂದ ಶಾಹಾಬಾಷ್‌ಗಿರಿ ಪಡ್ದೊಳೊ. ಆಟಿ ಹಬ್ಬದ ಕುರಿತು ಬರ್ದ ಪದನ ಶ್ರೀಮತಿ ಶೀಲಾ ಸೀತಾರಾಂ ಬಳಗದೊವು ಹಾಡಿ ಹೊಗ್ಳಿಸಿಕೊಂಡೊಳೊ. ನನ್ನ ಕೆಲವು ಕವಿತೆಗ ಸುದ್ದಿ ಬಿಡುಗಡೆ ವಾರಪತ್ರಿಕೆಲಿ ಪ್ರಕಟ ಆಗುಟ್ಟು. ಈ ಸಂದರ್ಭಲಿ ಅವರನ್ನನೂ ನಾ ನೆನ್ಸಿಕಣೆ. ಈಗ ನನ್ನ ಕವನ ಸಂಗ್ರಹ "ಸರ್ಮಾಲೆ"ನ ಅರೆಭಾಷೆ ಅಕಾಡೆಮಿ-ಇವರ್‌ಂದ ಪ್ರಕಟಣೆ ಆದೇಂತ ತಿಳ್ದ್ ನಂಗೆ ಬಾಳ ಕುಸಿ ಆದೆ. ಇದಕ್ಕೆ ಮುನ್ನುಡಿ ಬರ್ಯಕೆ ಒಪ್ಪಿಕಂಡ ಶ್ರೀಮತಿ ಸಂಗೀತಾ ರವಿರಾಜ್ ಮತ್ತೆ ಅರೆಭಾಷೆ ಅಕಾಡೆಮಿನ ಅಧ್ಯಕ್ಷರ್ ಹಾಗೂ ಸಲಹ ಬಳಗವುಕೆ ನನ್ನ ಕೃತಜ್ಞತೆನ ಅರ್ಪಿಸಿನೆ. ಜನಕ್ಕೆ ನನ್ನ ಬರವಣಿಗೆ ಹಿಡ್ಸಿರೆ ನಾ ಬರ್ದದಿಕ್ಕೆ ಸಾರ್ಥಕ.

ಅರೆಭಾಷೆ ಬೆಳ್ಯಲಿ
ಅರೆಭಾಷೆ ಉಳ್ಯಲಿ

ಎಂ.ಜಿ. ಕಾವೇರಮ್ಮ
"ನಿಸರ್ಗ" ಮಾವಾಜೆ, ಸುಳ್ಯ.

# ನೆಂಟಾರ ಹೆಸ್ರೇಳಿ ಎಲ್ಲೋವು ಉಂಡೋ

ಒಂದಿನ ದೊಡ್ಡಕ್ಕ ಬೊಳ್ಪಿಗೆ ಬಂದತ್ತ್
ಹಿಂಬೊತ್ತು ಹೋಕೂಂತ ಅಂಬೆರ್ಪು ಮಾಡ್ತ್
ಏನ್ ಮಾಡ್ದೂಂತ ಅವ್ವಂಗೆ ಗೊತ್ತಾತ್ಲೆ
ಇಜ್ಜೆಲಿಗೆ ಬಂದೋ ಕೋಳಿಗಳ ನೋಡ್ದೊ

ಕೋಳಿ ಕಾಂಕ್ರ್ಸ್ತಿತ್ ಮೊಟ್ಟೆ ಇಸಿಕೆಂತ
ಆಚೆ ಈಚೆ ಓಡ್ಕಂಡ್ ಜಾಗೆನ ಹುಡ್ಕತಿತ್ತ್
ಅಜ್ಜಪ್ಪ ಬಂದೋ ಕೋಳಿನ ಹಿಡ್ದೊ
ಇಜ್ಜೆಲಿಲಿ ಕೋಳಿನ ಕುತ್ತಿಗೆನ ಮುರ್ದೋ

ಪಟ ಪಟ ಹೊರಳ್ದ ಕೋಳೀನ ತಕಂಡ್
ಬಿಸ್ನೀರ ಕೊಟಗೇನ ಒಳಾಗೆ ಹೋದೋ
ತೊಪ್ಪನ ತೆಗ್ದೊ ಕಿಚ್ಚಿಲಿ ಕಾಸಿದೊ
ಮಾಸಾನ ಮಾಡಿ ಪೊರ್ಲುಲಿ ತೊಳ್ದೊ

ಅಜ್ಜಪ್ಪ ಮಾಸಾನ ಸೊಸೆ ಕೈಲಿ ಕೊಟ್ಟೊ
ಹುಳಿ ಮೆಣ್ಸ್ ಕಡ್ಡ್ ಕೊದ್ಯಕೆ ಇಟ್ಟ್
ಕಾಯಿನ ಹಾಲ್‌ನ ಆಮ್ರಕ್ಕೆ ತೆಗ್ದೊ
ಅಕ್ಕಿನ ಕಡ್ಡ್‌ದ್ ರೊಟ್ಟಿನು ತಟ್ಟಿದೊ

ಅಕ್ಕಂಗೆ ಗಮ್ಮತ್ತ್ ಹುಳಿಮೆಣ್ಸ್ ಕೋಳಿ ಗೈಪು
ಕಾಯಾಂಬ್ರಕೆ ಹುಗ್ಗೆ, ಪೊಕ್ಕದ ರೊಟ್ಟಿ
ಉಳ್ದೊವ್ಕು ಹೊಟ್ಟೆತುಂಬ ಮಾಸಾದ ಊಟ
ನೆಂಟಾರ ಹೆಸ್ರೇಳಿ ಎಲ್ಲೋವು ಉಂಡೋ

*****

# ಪಚಾರ

ಹನ್ನೆರ್ಡ್ ಕಂಬನ ಚಪ್ಪರ ಹಾಕಿ
ಗೊನೆ ಬಾಳೆ ದಂಡ್‌ನ ಬಾಕ್‌ಲಿಗೆ ನೆಟ್ಟ್
ಮಾಯ್ನಮರದ ಸೊಪ್ಪುನ ತೋರಣ ಕಟ್ಟಿ
ಮೊಡ್ಯಾಳ ಕಟ್ಟಿದ ಮೇಲ್ಕಟ್ ಅಡಿಲಿ
ಮೊದ್ಮಂಜ, ಮೊದೊಳ್ಗೆ ಸೇಸೆಗೆ ಕುದ್ದೋಳೊ ॥೧॥

ಪಟ್ಟೆ ಸೀರೆನ ಉಡ್ಸಿ ಬಾಸಿಂಗ ಕಟ್ಟಿ
ರೇಸಿಮೆ ರವ್ಕೆಲಿ ಮೊದೊಳ್ಗೆ ಗೂಡೆ
ಬಾರೀ ಪೊರ್ಲುಲೆ ಕಾಂಬಾತಿತ್ತ್
ಹಾಕಿದ ಪದಕ ಚಿನ್ನದ ಮಾಲೆಗ
ಕಣ್ಣುಗೆ ಕಾಂಬಾಂಗೆ ಪಳಪಳ ಹೊಳ್ಯತಿತ್ತ್
ಸೊಂಟಲಿ ಡಾಬೂ ಕಾಲ್‌ಲಿ ಗೆಜ್ಜೆ
ಹೆಜ್ಜೆ ಇಸಿಕನ ಗಿಜಿಗಿಜಿ ಹೇಳ್ತಿತ್ತ್
ಕೈತುಂಬಾ ಬಳೆಗ ಕಿಣುಕಿಣು ಮಾಡ್ತಿತ್ತ್
ಮೊದ್ರಂಗಿ ಕೈಲಿ ಉಂಗುರ ಎರಡಿತ್ತ್
ಬಾರಿ ಪೊರ್ಲು ಕಾಂಬಾತಿತ್ತ್ ॥೨॥

ಪೊರ್ಲುನ ಗೂಡೆಗೆ ಪೊರ್ಲುನ ಹೈದ
ಹೈದನ ಮೋರೇಲಿ ಗೆದ್ದೇಂತ ನೆಗೆ
ಓರೆ ಕಣ್ಣ್‌ಲಿ ಅಂವ ಗೂಡೆನ ನೋಡ್ತಿತ್ತ್
ಮೊದಪಳ್ಗೆ ಮೋರೆಲಿ ನಾಚಿಕೆ ಕಾಂಬತಿತ್ತ್
ತಲೆನ ತಗ್ಗಿಸಿ ನೆಲನ ನೋಡ್ತಿತ್ತ್.
ಮುಸ್ಕುನ ಚೌಕನ ಆಗಾಗ ಉಳ್ಯತಿತ್ತ್ ॥೩॥

ಬಂದ ಜನಂಗೆಲ್ಲ ಸೇಸೆನ ಹಾಕಂಡ್
ಮೊದುಮಕ್ಕ ಕೈಗೆಲ್ಲ ದುಡ್ಡುನ ಕೊಟ್ಟೊ
ಪಚಾರದ ಹರಿವಾಣ ಮಣೆ ಮೇಲೆ ಇಸಿದ್ದೊ
ದುಡ್ಡುನ ಅದರ್ಲಿ ಹಾಕಿದೊ ಜನಂಗ
ಮುತ್ತೈದೆ ಹೆಣ್ಣ್‌ಗ ಆರತಿ ತಂದೊ
ಸೋಬಾನೆ ಹೇಳ್ಕಂಡ್ ಆರತಿ ಮಾಡ್ದೊ
ಮೊದುಮಕ್ಕಮುಂಡಕೆ ಕುರ್ದಿನ ಬೊಟ್ಟಿಟ್ಟೊ
ಕುರ್ದಿ ನೀರ್‍ನ ಚಾಳೆಗೆ ಹೊಯ್ದೊ ॥೪॥

ಸೇಸೆ ಕಳ್ದಾ ಮೇಲೆ ಬಾಳೆಲೆ ಹಾಕಿದೊ
ಸಾಲ್‌ಲಿ ಕುದ್ದೋ ನೆಂಟ್ರೆಲ್ಲಾ ಉಂಡೊ
ಹು ಗೆ ಚಿಬೆರಿ–ಮುಂಡಿ ಗಸಿನು ಇತ್ತ್
ಎಳ್ತ್ ಸೋಂತೆ ಹೋಳ್ನ ಸಾಂಬಾರ್ ಇತ್ತ್
ಪದಂಜಿ ಪ್ಯಾಸ ಅವ್ಲಕ್ಕಿ ತಿಂದೊ.
ಸೊರೊ ಸೊರೊ ಎಂದ್ ಸದ್ದ್‌ನು ಮಾಡ್ದೊ
ಹಪ್ಪಳ ಪುಡಿ ಪುಡಿ ಮಾಡಿನು ತಿಂದೊ
ಮಾಯ್ನ ಕಾಯಿ ಉಪ್ಪನ ಕ್ಯಾನೆಕೆಂಡ್ ಉಂಡೊ ॥೫॥

*****

# ನೆಂಪು

ಹಟ್ಟಿಗೆ ಸೊಪ್ಪಿಲ್ಲೆ ದನಂಗ್ ಉಪಾಸ
ಒಂದ್ರಾಸಿ ಮೊಡ್ಕೆಗ ತೊಳ್ಯಾಕೆ ಬಿದ್ದುಟ್ಟು
ಜಾಲ್ನ ಗುಡ್ಸಿತ್ಲೆ । ನೀರ್‌ನು ತಾತಿಲ್ಲೆ
ತಿಮ್ಮಕ್ಕ ಇನ್ನೂ ಬಂದತ್ತೆ ಇಲ್ಲೆ ॥1॥

ಇಂದ್‌ನ ಸಂಬಳ ನಿನ್ನೆನ್ನೇತಕಂಡುಟ್ಟು
ಯಾರ್ನ ನಂಬುದು ಯಾರ್ನ ಬುಡ್ದು
ಕಲಿಕಾಲ ಕೆಟ್ಟೋತ್, ದನಿಂಗ ಆಳಾತ್
ಬಂದ ದುಡ್ಡು ಇವ್ಕಾತ್, ಸಾಲ ಮಾಡಿ ಸಾಕಾತ್

ಬೊಯ್ಯೊಕೆ ಬೊತ್ತ್ ಬೊಯ್ದರೆ ನಾಳೆ ಇಲ್ಲೆ
ಅವ್ಕೇನ್, ಎಲ್ಲೋವು ಅವರ್ನ ಕರ್‍ಯೋವೆ.
ಕೂಲಿಗ ಸಿಕ್ಕಿಕಿಲ್ಲೆ, ನಾವ್ಗೆಗತಿ ಇಲ್ಲೆ
ಹೇಳ್ದ ಸಂಬಳ ಕೊಡೊಕು ಮಾಡ್ದ ಕೆಲ್ಸ ನೋಡೋಕು.

ಬಾಳೆಕ್ಕಾ ತಿಂಬೊದಿಲ್ಲೆ, ಹಲ್ಸಿನ ಕ್ಯಾಮುಟ್ಟುದುಲ್ಲೆ
ಎಣ್ಣೆಲ್ ಮೀನ್, ಹುಳ್ಳಂಗೆ ಸಾರ್
ಇತ್ಲರೆ ಅವ್ರ ದೊಂಡೆಗೆ ಇಳ್ಯೊದಿಲ್ಲೆ
ಉರ್ಗೆಲ್ ಸಬ್ದ ಕೇಳ್ದಾಂಗಾತ್ ತಿಮ್ಮಕ್ಕ ಬಂದೇಬುಡ್ತ್

*****

# ಉಗ್ಗವ್ವ

ಅಪ್ಪನ ಅವ್ವ ನನ್ನ ಉಗ್ಗವ್ವಾ
ಸಾಕ್ತಿತ್ತ್ ನನ್ನಾ ಪೊರ್ಲುಲಿ
ಹೋಕನ ಬಾಕನ ಹಿಂದೆನ ತಿರ್ಗ್‌ತಿದ್ದೆ
ನೋಡ್ತಿದ್ದೆ ಅದರ ಪ್ರೀತಿಲಿ

ಬೆನ್ನುನು ಬಾಗಿತ್ತ್ ಕಾಲ್‌ನೂ ನಡ್ಗ್‌ತಿತ್ತ್
ಮೋರೆಲಿ ನೆರಿಗೆ ಬಿದ್ದಿತ್ತ್
ಕಣ್ಣುನು ಕಾಂಬತಿಲ್ಲೆ, ಬಾಯಿಲಿ ಹಲ್ಲಿಲ್ಲೆ
ತೊಂಭತ್ತ್ ವರ್ಸಾನು ಬೊದ್ಕಿತ್ತ್

ರವಿಕೆನು ಹಾಕ್‌ತಿಲ್ಲೆ, ಲಂಗಾನು ಇಲ್ಲೆ
ಸೀರೆನ ಒಳಗೊಂದು ತುಂಡಿತ್ತ್
ಹಕ್ಕಲೆ ಕರ್ಕಂಡ್, ಮರ್ದುವ ಪುಳ್ಳಿಕಳ
ಕುದ್ರಿಸಿ ಮಜಣೆ ಮಾಡ್ತಿತ್ತ್

ಬೆಳ್ಳಿತಲೆ ಕೂದೊಲು, ಸೂಡಿನ ಕಟ್ಟಿತ್ತ್
ಚಿನ್ನದ ಓಲೆ ಕೆಬಿಲಿತ್ತ್
ಕರಿಮಣಿ ತಾಳಿಲಿ ಎರಡಿತ್ತ್ ಹವಳ
ಬೆಳ್ಳಿನ ಕಡಗ ಕೈಲಿತ್ತ್.

# ಪಂಡ್‌ನ ಕಾಲ

ನಮ್ಮ ಅವ್ವ ಹೇಳ್ತಿದ್ದ ಬಾರಿ ಪಂಡ್‌ನ ಕಾಲ
ಮರ್ಚಟ್ಟೆ, ಕುರ್ಚಟ್ಟೆ, ಅಳಗೆ ಮಡ್ಕೆನ ಕಾಲ
ಕೀಜಿನ ಪಾತ್ರೆಗ ಹುಡ್ಕಿರು ಸಿಕ್ಕಿಕಿಲ್ಲೆ
ಸ್ಟೀಲಿನ ಬಟ್ಲಂತು ಕಂಡವ್ರೆ ಇಲ್ಲೆ

ನೀರ್‌ನ ತುಂಬಿಸಿಕೆ ಕಂದೇಲ್, ಮಡ್ಕೆಗ
ಉಂಬಕ್ಕೆ ಕುರ್ಚಟ್ಟೆ ಕುಡ್ಯಕೆ ಗುಂಬ
ಈಗಾನ ಮಕ್ಕಗೆ ಹೆಸ್ರ್‌ನೆ ಗೊತ್ತಿಲ್ಲೆ
ಆಗಾನ ಮಕ್ಕಾಳ ಪೊರ್ಲುನ ಕಾಲ.

ಮಲ್ಗಿಕೆ ಮಂದ್ರಿ ಹೊದ್ಯಾಕೆ ಒಲ್ಲಿ
ತಲೆಗಡಿ ಮಣೆಇಟ್ಟ್ ಮಲ್ಗುವ ಕಾಲ
ಬೆಳ್ಗಾರ್ ಬೇಗಾನೆ ಎದ್ರುವ ಕಾಲ
ಕತ್ತಲೆ ಆಕಾನೆ ಮಲ್ಗುವ ಕಾಲ

ಅಜ್ಜಪ್ಪ ಉಗ್ಗಾವ ಒಟ್ಟಿಗೆ ಇದ್ದೊ
ಅಣ್ಣಾನ ಮಕ್ಳನೂ ಆಡಿಕೆ ಇದ್ದೊ
ತುಂಬಿದ ಸಂಸಾರ ಏಚನೆ ಇಲ್ಲೆ
ಮನೆ ತುಂಬ ಜನ ಮನ್ಸಿಗೆ ಕುಸಿ ಇತ್ತ್

ದಿನ ದಿನ ನೆಂಟ್ರೆಲ್ಲ ಬರ್ತಿದ್ದೊ ತುಂಬ
ಇದ್ದದ್ನ ಉಂಡೆದ್ದ್ ಹೋಗ್ತಿದ್ದೊ ಅಂದ್
ಬಾಯ್ ತುಂಬ ಮಾತ್ ಕೈತುಂಬ ಕೆಲ್ಸ
ಎಲ್ಲಾ ಹಾಳಾತ್ ಕಾಲಾನೆ ಕೆಟ್ಟೋತು.

*****

# ಆಟಿ ಕಳಂಜ

ಬೂದಿನ ಉಂಡೆನ ಸಣ್ಣಕ್ಕ ಮಾಡ್ತಿತ್ತ್
ಏಕೇಂತ ಕೇಳ್ದೇ ಬೇಕೂಂತ ಹೇಳ್ತ್
ಬೇಗಾನೆ ಹೇಳೆಂದ್ ಪಿರಿಪಿರಿ ಮಾಡ್ದೆ
ಕಳಂಜಂಗೆ ಹೊಡ್ಯಾಕೆ ಬೇಕೂಂತ ಹೇಳ್ತ್ ॥೧॥

ಆಗ ನೆಂಪಾತ್ ಆಟಿಕಳಂಜನ ಕುಣ್ತ
ಚಾಳೆನ ಚಿರೀನ ಸೀಳ್‌ನಲಂಗ
ಚಾಳೆನ ಒಲಿನೆ ತಲೆಗೆ ಬಾಸಿಂಗ
ಕೆಂಪಂಗಿ ಒಲಿಕೊಡೆ ಕಳಂಜನವೇಸ ॥೨॥

ಮೋರೆಲಿ ಅರ್ಧಾಳ ಕೈಲಿಕೋಲ್
ಹಾಳೆನ ಮೆಟ್ಟ್‌ನ ನಡಿಗೆನ ಕಾಲ್
ಕಳಂಜನ ಹಿಂದೆನು ಮಕ್ಕಾಳ ಸಾಲ್
ನೋಡಿಕು ಕುಣ್ತನು ಬಾರೀ ಪೊರ್ಲು ॥೩॥

ದೂರಂದಕೇಳ್ ಡೋಲ್‌ನ ಸದ್ದ್
ಕಳಂಜನ ಕೂಟ ಬಂದೇ ಬುಡ್ತ್
ಜನಂಗೆಲ್ಲ ಸೇರ್ದೋ ಕಣ್ತುಂಬ ನೋಡ್ದೊ
ಡೋಲ್‌ನ ಸದ್ದ್‌ಗೆ ಗದ್ದಾಳ ಮಾಡ್ದೊ ॥೪॥

ಹೆಣ್ಣೊಂದು ಒಟ್ಟಿಗೆ ಕುಣ್ಕಂಡ್ ಬಾತಿತ್ತ್
ಇನ್ನೊಂದ್ ಹೆಣ್ಣ್ ಡೋಲುನ ಬೊಟ್ತಿತ್ತ್.
ಪಾಡ್ದನ ಹೇಳ್ಕಂಡ್ ರಾಗಲಿ ಹಾಡ್ತಿತ್ತ್.
ಕೋಲುನ ಹಿಡ್ಕಂಡ್ ಕಳಂಜನು ಕುಣಿತಿತ್ತ್ ॥೫॥

ಹಕ್ಕಲೆ ಬಾಕನ ಬೂದಿನ ಉಂಡೆನ
ಅಕ್ಕಾ, ಜೋರ್‌ಂದ ಹೊಡ್ದೇ ಬುಡ್ತ್
ಮಕ್ಕಾ ಕುಣ್ಕಂಡ್ ಚಪ್ಪಾಳೆ ತಟ್ಟಿದೊ
ಕಳಂಜ ಕೊಡೆನ ಅಡ್ಡಹಿಡ್ಡ್ ಓಡೇಬುಡ್ತ್ ॥೬॥

*****

# ಬೊಳ್ವುನ ಕೆಲ್ಸ

ಅಡ್ಗೆರದ ತೆಳಿನ ಮರ್ಗಿಲಿಗೆ ಹೊಯ್ದ್
ದನಂಗಳ ಕರ್ದ್ ಕುಡ್ಯಾಕೆ ಕೊಟ್ಟ್
ಕರು ಬುಡ್ವ ದನಕೆ ಮೊಡ್ಡಿನ ತಿನ್ಸಿ
ಕಂಚಿಳ್‌ಲಿ ಇದ್ದ ಕರ್ಗಳ ಬುಟ್ಟತ್ತ
        ದೊಡ್ಡ ದೊಡ್ಡ ಚೊಂಬುಲಿ ಹಾಲ್‌ನ ಕರ್ದ್
        ಅಂಗಾರನ ಕಲ್ಲಿಗೆ ಹಾಲ್‌ನ ಇಸಿ
        ನೊರೆ ಹಾಲ್ ಚೊಂಬುನ ನೆಲುಮೇಲೆ ಇಟ್ಟ್
        ಜಾಲಿಗೆ ಬಂದ್ ಕರ್ಗಾಳ ಕಟ್ಟಿತ್
ಮಜ್ಜಿಗೆ ಕಡ್ಯೆಕಂತ ಮೊಂತುನ ತಂದ್
ನೆಲುಲಿದ್ದ ಮೊಸ್ರ್‌ನ ಮಡ್ಕೆಗೆ ಹಾಕಿ
ದರ ಬರ ಸದ್ ಮಾಡಿ ಮೊಸ್ರ್‌ನ ಕಡ್ದ್
ಬೆಣ್ಣೆನ ತೆಗ್ತ್ ಮಡ್ಕೆಗೆ ಹಾಕ್ತ್
        ಕೋಂಬ್ರೇಲಿ ಮಲ್ಗೀದ ಗೂಡೆಗಳಾಕರ್ದ್
        "ಎದ್ರಿನಿ ಮಕ್ಕಳೆ ಬೆಳ್ಳಂಗೆ ಬೊಳ್ವಾತ್
        ಮನೆ ಕೆಲ್ಸ ಬಾಕ್ಯುಟ್ಟು ಮಾಡ್ದಸ್ಟ್ ಮುಗ್ಯಕಿಲ್ಲೆ
        ಗಂಡಾನ ಮನೆಗೋಗಿ ನಿಮತುಪ್ಪ ಕಾರ್ದೆ"
ಗೂಡೆಗ ಅಲ್ಲಿಂದ ಪೊರ್ಲುನ ನೋಡಿ
ಸೆರ್‌ಗ್‌ನ ಬಾಯ್ಗಿಟ್ಟ್ ಮುಸಿಮುಸಿ ನಗ್ತ್
ಒಂದಾರ ಕಾಲ್ ಇನ್ನೊಂದರ ಮೇಲಿತ್ತ್
ಒಲ್ಲಿನೂ ಕಾಲ್‌ನ ಕೆಳಗೆ ಜಾರಿತ್ತ್
        ಅವ್ವ ಕರ್ದದ್ ಕೇಳಿ ಗೂಡೆಗ ಎದ್ದೊ
        ಬಾಯಿನ ಮುಕ್ಕಿಸಿ ಮೋರೇನ ತೊಳ್ದೊ
        ಮುಂಡಕ್ಕೆ ಕೆಂಪುನ ಬೊಟ್ಟುನು ಇಟ್ಟೊ
        ಒಂದೊಂದೆ ಕೆಲ್ಸಾನ ಹುಡ್ಕೊಂಡ್ ಮಾಡ್ದೊ

*****

# ಗದ್ದಳ

ಅಂಬಟೆ ಅಡ್ಕಲಿ ತುಂಬಿದ ಜನಂಗ
ಭಾರೀ ಗಮ್ಮತ್ತ್ ಮಾಡ್ತಿದ್ದೊ
ಒಂದಂತ್ ನಿಜ ಬಂದ ಜನಂಗೆಲ್ಲ
ತಂದಾನ ತಾನ ಹಾಡ್ತಿದ್ದೊ ॥೧॥

ಕಾರಣ ಕೇಳದೆ ತೋರಣ ಕಟ್ಟಿದ್ದೊ
ಹೂರಣ ಏನ್ಂತ ಕಾಂಬೊದಿಲ್ಲೆ
ಭಾರೀ ಭಾರೀ ಜನಬಂದ್ ಸೇರ್ತಿದ್ದೊ
ಮೋರೇ ಮೋರೆನ ನೋಡ್ತಿದ್ದೊ ॥೨॥

ಸುತ್ತ್ ಮುತ್ತ್ ಜನ ಹೊತ್ತ್ ಗೊತ್ತಿಲ್ಲದೆ
ಕತ್ತೆ ಹಾಂಗೇ ದುಡ್ಯತಿದ್ದೊ
ಮತ್ತೆ ಅವ್ಕೆಲ್ಲಾ, ನೆಂಪಿಲ್ಲೆ ಮನೆ ಮಟ
ಹೊತ್ತ್ ಹೋದಾದೇ ಗೊತ್ತಾತಿಲ್ಲೆ॥೩॥

ಒಗ್ಯಾಕೆ ನರುವೊಳು ಮಿಾಯಕೆ ಸೀಗೆ
ಸಾಬಾನ್ ಅದಕೆ ಬೇಕಿಲ್ಲೆ
ಬೆಣ್ಣೆಕರ್ತೆ ಸೊಪ್ಪುಲಿ ಒಡ್ಯೆನ ಮಾಡಿ
ತಲೆನ ಪೊರ್ಲ್ಲಲಿ ತೊಳಿತಿತ್ತ್

ಮೋಸಾನು ಗೊತ್ತಿಲ್ಲೆ ಪಾಪದ ಉಗ್ಗವ್ವ
ಎಲಾಡ್ಕೆ ಬಾಯ್ತುಂಬ ತಿಂಬತಿತ್ತ್
ಕಲ್ಲ್‌ಲಿ ಗುದ್ದಿ ಸುಣ್ಣ ಎಲಾಡ್ಕೆನ
ಬೊಚ್ಚು ಬಾಯಿಗೆ ಕೊಡ್ತಿದ್ದೆ

ಎಲಾಡ್ಕೆ ಸುಣ್ಣದ ಪೊಂಚಿನ ಒಳಗೆ
ಹೊಸೆಪುನ ತುಂಡುನು ಇರ್ತಿತ್ತ್
ಬೆಳ್ಳಿನ ಚೈನಿತ್ತ್ ಸುಣ್ಣದ ಕರ್ಡಿಗೆಗೆ
ಬೆಳ್ಳಿನ ಕಡ್ಡಿ ತೆಗ್ಯಕಿತ್ತ್

ಸೂಜಿಗೆ ನೂಲುನ ಹಾಕಿ ಕೊಡ್ತಿದ್ದೆ
ಹರ್ದಾ ಸೀರೆನ ಹೊಲ್ಸಕೇಂತ
ಇರ್‌ಳ್‌ಲಿ ಅದರ ತಬ್ಬಿಕಂಡ್ ಮೊಲ್‌ಗತಿದ್ದೆ
ಹೆದ್ರಿಕೆ ನಂಗೇ ಆದೇಂತ

ಒಟ್ಟಿಗೆ ಹೋಗ್ತಿದ್ದೆ ನೆಂಟರ ಮನೆಗೆ
ಮಾರಾಪು ಕೈಲಿ ಹಿಡ್ಕಂಡ್
ಮೆಲ್ಲನೆ ನಡ್ಯತಿತ್ತ್ ದೊಣ್ಣೆನ ಊರಿಕಂಡ್
ಮಾರುದ್ದ ದಾರಿಲಿ ಕುದ್‌ಕಂಡ್

ಕೂಡು ಕುಟುಂಬಲಿ ಬಾಳಿ ಬೊದ್ಕಿತ್
ಇಂದ್ ನೆಂಪಾದೆ ಉಗ್ಗವನಾ
ಮಕ್ಕ, ಪುಳ್ಳಿಕ, ಮರಿಮಕ್ಕಳ ಕಂಡಾ
ಪುಣ್ಯಾದಿಗಿತ್ತಿ ಕೇಪಕ್ಕನಾ

*****

## ಅಜ್ಜಪ್ಪ

ಕತೆಗಳಾ ಭಂಡಾರ ನಮ್ಮ ಅಜ್ಜಪ್ಪ
ತರತರದ ಕತೆಗಳ ಹೇಳ್‌ತಿದ್ದೊ
ಹೆಡ್ಡದೂಮನ ಕತೆ, ಬುರ್ದ-ಬುರ್ಡಿಕತೆ
ಬಾನಿಲಿ ಹಾರುವ ರೆಕ್ಕೆ ಕುದುರೆ ಕತೆ
ಒಂದೂನು ನೆಂಪಿಲ್ಲೆ, ಅರೆಬರೆ ಬಂದದೆ
ಅಂದ್‌ನ ಕಾಲದ ಪಂಡ್‌ನ ಕತೆಗಾ

ಹೊಟ್ಟೇ ಬೇನೆಗೆ ಹುಳಿವೆಣ್ಸ್ ಉಪ್ಪು
ಮೊಂತ್ರಿಸಿ ಕೊಡ್ತಿದ್ದೊ, ಕಣ್ಣಾಸ ತೆಗಿತಿದ್ದೊ
ನೂಲುನುಕಟ್ಟಿದ್ದೊ, ಮೊದ್ದುನು ಮಾಡ್ತಿದ್ದೊ
ಜನಂಗೆಲ್ಲ ಅವರ್‍ನ ಕರ್‍ಕಂಡ್ ಹೋಗ್ತಿದ್ದೊ
ಸಾಯಕನ ಮುಟ್ಟಾ ಕೆಲ್ಸಾನು ಮಾಡ್ತಿದ್ದೊ
ನೂರಾರ್ ವರ್ಸಾ ಬೊದ್ಕಿನು ಬಾಳಿದೊ

ಬಾಳೆಲೆ ಬಾಡಿಸಿ ಒಲೆ ಬೂದಿ ತಕಂಡ್
ಬೆಳ್ತಕ್ಕಿ ಹಾಕಂಡ್ ಮಣ ಮಣ ಮೊಂತ್ರಿಸಿ
ಮೊದ್ದ್‌ನ ಧರ್ಮಕ್ಕೆ ಕೊಡ್ತಿದ್ದ ಅವುಕೆ
ದುಡ್ಡುನ ಪಗರಕ್ಕೆ ಕೋಳಿ ಲಾಕಿಗಳ
ಪ್ರೀತಿಂದ ಕೊಟ್ಟ್ ಕಳ್ಳ್‌ನ ಕುಡ್ಸಿ
ಉಪಚಾರ ಮಾಡಿ ಸಮ್ಮಾನ ಮಾಡ್ತಿದ್ದೊ

ಪಾಪದ ಅಜ್ಜಪ್ಪ, ಹೆಸ್ರ್ ಬೋಳಗೌಡ
ಅವ್ಕಿತ್ತ್ ಪೂಜಾರ್ಮೆ, ಕುಟುಂಬದ ಎಜಮಾನ್ಕೆ
ಚಾವಡೀಲಿ ದೀಪಾನ ಹೋಸಿ, ಕೈಮುಗ್ದ್
ಕಡ್ತಲೆ ಹಿಡ್ಕಂಡ್ ದರ್ಸನ ಮಾಡ್ತಿದ್ದೊ
ಕಲ್ಲುರ್ಟಿ ಹರ್ಕಿನ ವರ್ಸೊಳು ಮಾಡಿ
ಇರಣಮಾಸೆಲಿ ಕೊಲೆಗಳಿಗೆ ಇಡ್ತಿದ್ದೊ

ಅವ್ಲಕ್ಕಿ ಮಾಡ್ತಿದ್ದೊ ಮನೆಲಿಕುಟ್ಟಿ
ಕಳ್ಳ್‌ನ ಕುಡ್ಯೊತಿದ್ದೊ ಹೊಸೆಪುನ ಕೊಟ್ಟ್
ಗುಡ್ಡೆಲಿ ಗುಳಿಗಂಗೆ ಕೋಳಿಗೈಪು ಹುಗ್ಗೆ
ಎಡೆ ಇಕ್ಕಿ ಕೈಮುಗ್ದ್ ಉಂಡ್ ಬಾತಿದ್ದೊ
ನಡ್ಕಂಡ್ ಹೋಗ್ತಿದ್ದೊ ಊರ್‌ಂದ ಊರಿಗೆ
ಅವ್ಕಿಲ್ಲೆ ದಣಿಕೆ, ಬೇನೆ, ಬೇಜಾರ

ಒಂದ್ಸಲ್ಲ್ ಹೋತಿಲ್ಲೆ ಸಾಯಕನ ಮುಟ್ಟ
ಕೊತ್ತಿನ ಹಲ್ಲ್‌ನು ಪಳ ಪಳ ಹೊಳಿತಿತ್ತ್
ಸೇರಕ್ಕಿ ರೊಟ್ಟಿನ ಒಬ್ಬನೆ ತಿಂಬತಿದ್ದೊ
ಬೆಳ್ಜಾರಿಲಿ ನೆಟ್ಟಗೆ ನೀರ್‌ನು ಹೊೈತಿದ್ದೊ
ಜರ–ಗಿರ ಬಾತಿಲ್ಲೆ, ಮೊದ್ದುನು ತಾತಿಲ್ಲೆ
ಕಾಡ್ನ ಸೊಪ್ಪು ಚೋಡ್ನನೀರೆ ಮೊದ್ದು.

*****

# ತಮ್ಮನ ಚೌರ

ತಿಂಗಳಿಗೊಮ್ಮೆ ಚೌರಿಜ ಬಂದದೆ
ಮಕ್ಕಳ ತಲೆಕೂದ್ಲ್ ಕತ್ರಿಸಿ ತೆಗ್ದದೆ
ಕಚಕಚ ಸದ್ದ್ ಮಾಡಿ ಕತ್ರಿನ ಓಡ್ಸಿದೆ
ಹಿಂದೊಮ್ಮೆ, ಮುಂದೊಮ್ಮೆ ತಲೆನ ಅಲ್ಲಾಡ್ಸಿದೆ

ನಾವೆಲ್ಲ ಮಕ್ಕಾ ಅವನ ಮುಂದೆ ಕುದ್ಕಂಡ್
ಪಿಳಿ ಪಿಳಿ ಕಣ್ಣ್ ಬುಟ್ಟ್ ಚೋದ್ಯನ ನೋಡುವೆ
ಸಣ್ಣಕ್ಕ ಒಮ್ಮೆ ಅದನೆಲ್ಲ ನೋಡ್ತ್
ಮನೆ ಹಿಂದೆ ತಮ್ಮನ ಕರ್ಕಂಡ್ ಹೋತ್

ತಮ್ಮನ ಕುದ್ರಿಸಿ, ತಲೆಕೂದ್ಲ್ ಕತ್ರಿಸೀತ್
ಸರಿ ಆತಿಲ್ಲೆಂತ ಸುತ್ತ್ ಮುತ್ತ್ ಕತ್ರಿಸಿತ್
ನೋಡಿಕನ ಅದ್ ಒಳ್ಳೆ ಇಲಿತಿಂದ ಹಾಂಗಿತ್ತ್
ಐಯ್ಯನ ಬಂಡೆ ಏನ್ ಮಾಡ್ದೂ ಈಗ ?

ಅಕ್ಕ ಹೆದ್ರಿ ಹೋತ್, ತಂಗೆ ಇದರ ನೋಡ್ತ್
ಓಡ್ಯೋಗಿ ಅವ್ವಂಗೆ ಎಲ್ಲ ಸುದ್ದಿ ಕೊಡ್ತ್
ಓಡಿಬಂದ ಅವ್ವ ಅಕ್ಕಂಗೆ ಗುದ್ದು ಕೊಟ್ಟ್
ತಮ್ಮನ ಕೈ ಹಿಡ್ದ್ ಎಳ್ಕಂಡ್ ಹೋತ್

ನೋಡಿದ ಮನೆ ಜನ ಬಿದ್ದ್ ಬಿದ್ದ್ ನಕ್ಕೊ
ಚೌರಿಜನ ಕರ್ದ್ ತಲೆ ಮಂಡೆ ತೋರಿಸ್ದೊ
ನಗಡಿಕಂಡ್ ಕ್ಷೌರಿಜ ಕತ್ರಿನ ಓಡ್ಸಿತ್
ಅಂತ್ ಇಂತ್ ತಮ್ಮನ ಮಂಡೆ ಸರಿ ಆತ್.

*****

ಹಿಂಬೊತ್ತ್ ಆಕಾನ ಬಂದ್ ಸೇರಿದೊಜನ
ಒಂಭತ್ತ್ ಹೆಣ್ಣ್‌ನ ಗುಂಬನ ಹೊತ್ತೊ
ತುಂಬದ ಜನಂಗೆಲ್ಲ ಮೆರೊಣ್ಗೊ ಹೊರ್ಟೋ
ಜಂಬರದ ಗೌಜಿಲಿ ಕುಣ್ಕಂಡ್ ॥೪॥

ಪೊರ್ಲುನ ಗೂಡೆಗ ಪದಗಳ ಹಾಡ್ತಿದ್ದೊ
ರಾಗಂದ ಜೋರ್‌ಲಿ ಹೇಳ್‌ತಿದ್ದೊ
ನೋಡಿದ ಜನಂಗೆಲ್ಲ ಕೆಬಿಕೊಟ್ಟ್ ಕೇಳ್ತಿದ್ದೊ
ಮಾಡ್ತಿದ್ದಕೆಲ್ಸಾನ ಮರ್ತೇ ಬುಟ್ಟೊ ॥೫॥

ಜನಂಗೆಲ್ಲ ಒಟ್ಟಿಗೆ ಜಾತಿನ ಹೆಸ್ರೇಳಿ
ಜೈಕಾರ ಹಾಕಂಡ್ ಹೋಗ್‌ತಿದ್ದೊ
ಆಗ ಗೊತ್ತಾತ್ ಜಾತಿ ಗೌಡರ ಸಭೆ
ಬೇಕೂಂತ ನಾವೂನು ಹೋಕುಗಡ ॥೬॥

ಈ ಕಾಲ ನಾವ್ಗೂನು ಜಾತಿ ಬಂದುಗ ಬೇಕ್
ಜಾತಿನ ಬುಟ್ಟ್ ನಾವು ಬೊದ್ಕಿಕಿಲ್ಲೆ
ಜಾತಿ ಒಗ್ಗಟ್ಟ್‌ಲಿ ನಾವೂನು ಮೇಲೆ ಪೋಯಿ
ಊರಿಗೆ ನಾವೇ ಗೌಡ್ರ್ ಗಡಾ ॥೭॥

*****

# ಯಾವ್ದರ ತಿಂಬೊದು ಯಾವ್ದರ ಬುಡ್ದು

ಅಣ್ಣನ ಮಗಳ ಮನೆಗೆ ಹೋಕನ
ಬಾರಿ ಪೊರ್ಲುನ ಅಡ್ಗೆ ಇತ್ತ್
ಹೊಟ್ಟೆನು ಇಸ್‌ತಿತ್ತ್, ದೊಂಡೆಪಸೆ ಆರಿತ್ತ್
ಅಡ್ಗೆನು ಬಾರಿ ಲಾಯ್ಕಾಗಿತ್ತ್

ಅಪ್ಪದ ಹಿಟ್ಟ್, ದೋಸೆನ ಒಟ್ಟಿಗೆ
ಬಟಾಟೆ ಬೇಳೆ ಸಾಂಬಾರ್ ಇತ್ತ್
ಕಣಿಲೆ ಗಸಿಗೆ ಪದಂಜಿ ಹಾಕಿತ್ತ್
ಬಾಳೆಕ್ಕಾ ಬೋಂಡ, ರಸಂ ಇತ್ತ್

ಅಂಬಟೆ ಉಪ್ಪನ ಕಾಯಿನು ಇತ್ತ್
ದಪ್ಪ ಮಜ್ಜಿಗೆ ಕುಡಿವೊಸ್ಟಿತ್ತ್
ಕ್ಯಾರೆಟ್ ಪ್ಯಾಸ ತಿಂಬೊಸ್ಟಿತ್ತ್
ಎಡೆ ಎಡೆಲಿ ಕಾಪಿನು ಕುಡ್ಯಕೆ ಇತ್ತ್
ದಾಳಿಂಬೆ ಸೇಬು ಜ್ಯೂಸ್‌ನು ಇತ್ತ್
ಯಾವ್ದರ ತಿಂಬೊದು ಯಾವ್ದರ ಬುಡ್ದು ?

****

# ಸೂಂತೋಡು ಸೊಸೆ

ಸೂಂತೋಡು ಮನೆನ ಸಾವ್ಕಾರ ಹೈದಂಗೆ
ಬಳ್ಳಡ್ಕ ಮನೆಂದ ಹೆಣ್ಣೊಂದ್ ತಂದೊ
ಭಾರೀ ಪೊರ್ಲುನ ಗೂಡೆ, ಹಣ್ಣ್ ಸೋಂತೆ ಬಣ್ಣ
ಮೋರೇನು ಹುಣ್ಣಿಮೆ ಚಂದ್ರನ ಹಾಂಗಿತ್ತ್ ॥೧॥

ಮಾರುದ್ದ ಜಡೆನು ಬೆನ್ನ್‌ಲಿ ಇಳ್ದಿತ್ತ್
ಸೋಬಾನೆ ಹಾಡ್‌ನ ಪೊರ್ಲುಲಿ ಹಾಡ್ತಿತ್ತ್
ಮನೆಕೆಲ್ಸಾನೆಲ್ಲಾ ಒಬ್ಬಳೇ ಮಾಡ್ತಿತ್ತ್
ಅತ್ತೆ ಮಾವಂಗೆ ಬಾಳ ಹೊಂದಿಕೊಂಡಿತ್ತ್ ॥೨॥

ಬಂದೊವ್ಕೆ ಹೋದೊವ್ಕೆ ಬಾಯ್ತುಂಬ ಮಾತಾಡಿ
ಹೊಟ್ಟೆ ತುಂಬ ಊಟನ ಕುಸಿಲಿ ಕೊಡ್ತಿತ್ತ್
ಅತ್ತಿಗೆ, ನಾದ್ನಿಕ, ಮೈದಾನಂಗೆಲ್ಲಾ
ಭಾರೀ ಕುಸೀನಾ ಅತ್ತಿಗೆ ಆಗಿತ್ತ್ ॥೩॥

ಎಂಟ್ ಮಕ್ಕಳ ಹೆತ್ತ್ ಸಾಕಿನು ಬೆಳ್ಸಿತ್
ಹಣಬರ ಸರಿ ಇಲ್ಲೆ ಗಂಡ ಸತ್ತೋತ್
ಬದ್ಕೆಲ್ಲಾ ಹಾಳಾತ್, ಬಾಳೆಲ್ಲ ಗೋಳಾತ್
ಪೊರ್ಲುನ ಹೆಣ್ಣ್‌ನ ಕತೆ ಕಡೆಗೂ ಹೀಂಗಾತ್ ॥೪॥

ಎಲ್ಲಾರ ಸಾಯಂದ ಮಕ್ಕದೊಡ್ಡೊವು ಆದೊ
ಮನೆ, ಮಠ, ಸಂಸಾರ, ಎಲ್ಲೋನು ಮಾಡ್ಕೊಂಡೊ
ಕೈತುಂಬ ಸಂಪಾದ್ನೆ ಅವ್ವನ ನೋಡ್ಕೊಂಡೊ
ಸಂತೋಸ, ಸುಖ, ಎಲ್ಲಾ ಅವ್ವಂಗೆ ಕೊಟ್ಟೊ ॥೫॥

ಕಾಲ ಕಳ್ದಾಂಗೆ ಪ್ರಾಯಾನು ಸಂದಾತ್
ಪುಳ್ಳಿಕಳ ನೋಡ್ಯಾತ್, ಊರೂರು ತಿರ್ಗೀತ್
ಎಪ್ಪತ್ತ ಎರಡ್ವರ್ಸ ಜೀವನ ಸಾಗ್ಸಿತ್
ಮುಪ್ಪು ಬಂದಾ ಮೇಲೆ ಸ್ವರ್ಗಕ್ಕೆ ಹೋತ್ ॥೬॥

*****

# ಗೌಡರ ಸುಳ್ಯನಗರ ಉದ್ಘಾಟನಾ ಪದ

ಸುಳ್ಯದ ನಗರದ ಮನೆ ಮನೆ ಗೌಡ್ರ್ಗ
ಬಂದ್ ಸೇರ್‍ನ್ಯೊಳೊ ಇಂದ್ ಕೊಡಿಯಾಲ ಬೈಲ್‌ಲಿ
ವೊರ್ಸಕ್ಕೆ ಒಮ್ಮೆ ಆದ್ರು ಒಟ್ಟಾಗಿ ಸೇರೋಕು
ಜಾತಿ ಮಕ್ಕಾ ನಾವು ಎಲ್ಲಾ ಮಾತಾಡೊಕು ॥೧॥

ಭಾರೀ ಗಮ್ಮತ್ ನಮ್ಮ ಜಾತಿ ಮಕ್ಕಳಿಗೆಲ್ಲಾ
ಬೊಳ್ಪುಂದ ಸಡಗರಲಿ ಒಡ್ಯಾಡುವೆ
ಬಣ್ಣದ ಸೀರೆಲಿ ಗೂಡೆಗೆ ಎಲ್ಲಾ
ಕ್‌ಣ್ಣಗೆ ಕಾಂಬಾಂಗೆ ಕುಣ್‌ದಾಡಿವೆ ॥೨॥

ಗಡಿಬಿಡಿ ಮೂಡ್ಕಂಡ್ ಹೈದಂಗ ಎಲ್ಲಾ
ಕೆಲ್ಸಾನ ಹುಡ್ಕೀ ಹುಡ್ಕೀ ಮಾಡಿವೆ
ಗೌಜಿ ಗದ್ದಾಳಾ ಜೋರಾಗಿ ಉಟ್ಟು
ಮಕ್ಕಳ ಓಡಾಟ ತುಂಬಾನೆ ಉಟ್ಟು ॥೩॥

ಮಕ್ಕಳಿಗು ದೊಡ್ಡೋವ್ಕ ಆಟೋಟ ಉಟ್ಟು
ಗೆದ್ದಾರೆ ಅಮ್ಮನು ಉಡ್ಗೋರೆ ಉಟ್ಟು
ಸೋಬಾನೆ ಪದನ ಗೂಡೆಗಾ ಹಾಡಿವೆ
ಅರೆಬಾಸೆ ಪದನಾ ಪೊರ್ಲುಲಿ ಹೇಳಿವೆ ॥೪॥

# ನಂಬಾಸೆ

ನಾವು ಗೌಡಾಜನಾ, ನಾವೊಂದ್ ಬಾಸೆ ಉಟ್ಟು
ಅರೆಗನ್ನಡಾ ಬಾಸೆ, ಇದ್ ಪೊರ್ಲುನಾ ಬಾಸೆ
ಬಾಸೆ ಇಲ್ಲದ ಜನ ನಾವಲ್ಲಾ ॥೧॥

ಕನ್ನಡ ಕೊಡಗಿಲಿ ಈ ಬಾಸೆ ಜನ ಒಳೊ
ಹತ್ತ್ ಕುಟುಂಬಾ, ಹದ್ನೆಂಟ್ ಗೋತ್ರಾದ
ಮನೆ ಮಾತ್ ಈ ಬಾಸೆ ಅರೆಗನ್ನಡಾ ॥೨॥

ಬಾಸೆ ಇದ್ದಾ ಮೇಲೆ ನಾವ್‌ಗ್ಯಾಕೆ ಅಂಜಿಕೆ
ಬೇರೇವು ಮಾತಾಡ್ವೆ ನಾವ್ಗೇಕೆ ಬೇಡ ?
ಜಾತಿ ಮಕ್ಕಾ ಸೇರಿ ಮಾತಾಡಿಕೆ ॥೩॥

ಮಕ್ಕಳಿಗೆ ಕಲ್ಸೋಕು, ಪುಳ್ಳಿಕಕಲ್ಯೋಕು
ಮುಂದಿನ ತಲೆಮಾರ್ ನಂಬಾಸೆ ಮರಿಯದೆ
ಅರೆಗನ್ನಡ ಬಾಸೆನ ಉಳ್ಸೋಕು ॥೪॥

*****

# ನಂಗೂನು ಬಳೆನಾ ಇಸೊಕವ್ವಾ

ಕಟ್ಟದ ಪುಣೆಲಿ ಬಳೆಗಾರ್ತಿ ಬಂದದೆ
ನಂಗೂನು ಬಳೆನಾ ಇಸೊಕವ್ವಾ
ಮುತ್ತು ಚೂರೂ ಬಳೆ ಪಾಟ್ಲಿನ ಬಳೆಗಾ
ಚಿನ್ನದ ಮೆರ್ಲಿನ ಪಚ್ಚೆ-ಕೆಂಪು ಬಳೆಗಾ
ಕೈತುಂಬ ಬಳೆನಾ ಇಸೊಕವ್ವಾ ॥೧॥

ಅದ್ ದೂರ ಹೋದೆ ಪುಣೆಲಿತಿರ್ಗಿದೆ
ಬೇಗಾನೆ ಕರ್ಲ್ಯೋಕು ನೋಡವ್ವಾ
ಈಗದ್ ಬಾತ್ಲರೆ ಮುಂದಿನ ವರ್ಸಕೆ
ಕಾಯೊಕು ನಾವೂ ಬಳೆ ಇಸಿಕೆ
ಬೇಗಾನೆ ಕರ್ಲ್ಯೋಕು ನೋಡವ್ವಾ ॥೨॥

ನಿನ ಹಕ್ಕಲೆ ಇತ್ಲರೆ ಬೀಜ ಮಾರ್ದ ದುಡ್ಡುಟ್ಟು
ಅದ್ ದೂರ ಹೋದೆ ಕರಿಯವ್ವಾ
ಬೇರೆ ಕಡೆ ಹೋದಾರೆ ಒಳ್ಳೊಳ್ಳೆ ಬಳೆಗೆಲ್ಲಾ
ಬೇರೆವ್ರ ಪಾಲಾದೆ ನೋಡವ್ವಾ
ನಂಗೂನೂ ಬಳೆನಾ ಇಸೊಕವ್ವಾ ॥೩॥

ಮಗಳಾ ಮಾತ್‌ಕೇಳಿ ಕರ್ತ್ ಬಳೆಗಾರ್ತಿನ
ಬಾರವ್ವ ಬಳೆಗಾರ್ತಿ ನನ ಕೂಸಿಗೆ
ಕೈತುಂಬ ಬಳೆನಾ ಇಸೊಕು ಬಲಾ
ಅದರ ಮೋರೆ ಅರ್ಥಿರೆ ನನ ಹೊಟ್ಟೆತುಂಬಿದೆ
ಬೇಗಾನೆ ಬಾರವ್ವ ಬಳೆಗಾರ್ತಿ ॥೪॥

ಬಳೆಗಾರ್ತಿ ಬಂದಾದೆ, ಬಳೆಗಾಳ ಹರ್ಡಿದೆ
ತರತರದ ಬಣ್ಣಾದ ಬಳೆಗಳಿದ್ದೊ
ಅವ್ವ ಮಗಳ್ ನೋಡ್ವೆ ಬೇಕಾದ್ ತೆಗ್ದಾವೆ
ಬಳೆಗಳಿಗೆ ಕೈಮುಗ್ದ್ ದುಡ್ಡುನು ಕೊಟ್ಟಾವೆ
ಬಳೆಗಾರ್ತಿ ಕುಸಿಲಿ ಮುಂದೆ ಹೋತ್ ॥೫॥

*****

# ಗೂಡೆನ ಮೊದ್ವೆ

ನಲ್ವತ್ತ್ ವರ್ಸಾದ ಗೂಡೆ ಒಂದಿತ್ತ್ ।
ಗಂಡ್‌ಗ ಬಾರದೆ ಬೇಜಾರ್ಲಿತ್ ॥
ಅಪ್ಪಂಗೆ ಯಾಗೋಳು ಬಾರಿ ಕಾಯ್ಲೆ ।
ಅವ್ವನ ಕಾರ್ಬಾರ್ ಬರೀ ಬಾಯ್ಲೆ ॥೧॥

ದೂರದ ಊರ್‌ಂದ ಗಂಡೊಂದ್ ಬಾತ್ ।
ಅವ್ವಂಗೆ ಬಾರೀ ಕುಸೀ ಆತ್ ॥
ಗೂಡೆನು ನೋಡ್ತ್ ಹೈದನ ಒಪ್ಪಿತ್ ।
ಹೈದಂಗೂ ಪ್ರಾಯನು ಬರೇ ಐವತ್ತ್ ॥೨॥

ಮೊದ್ವೆನ ದಿನ ದಿಬ್ಬಣ ಬಾತ್ ।
ಬಂದ ಜನಂಗೆಲ್ಲ ಬರೇ ಒಂಬತ್ತ್
ಮೊದ್ಮಜ, ಮೊದೊಳ್ಗೆ ಸಿಂಗಾರ ಮಾಡ್ದೊ ।
ದಾರೆ ಮಂಟಪಕ್ಕೆ ಗೂಡೆನ ತಂದೊ ॥೩॥

ಆಗಳೆ ನಾಲ್ಕ್ ಜನ ಪೋಲಿಸ್ ಬಂದೊ ।
ಮೊದ್ಮಜನ ಕೈಗೆ ಕೋಳಾನ ಹಾಕ್ದೊ ॥
ಬಂದ ನೆಂಟ್ರೆಲ್ಲಾ ಗಡಿ ಬಿಡಿ ಮಾಡ್ದೊ ।
ಮದ್ವೆ ಮನೆಂದ ಅರ್ದಲಿ ಓಡ್ದೊ ॥೪॥

ಹಿಂದೆನೆ ಅವಂಗೆ ಮೊದ್ವೆ ಆಗುಟ್ಟು ।
ಎರಡನೆ ಮೊದ್ವೆನ ಸಂಗತಿ ತಿಳ್ದ್ ॥
ಮೊದ್ಲ್‌ನ ಹೆಣ್ಣ್ ಕೇಸ್‌ನ ಕೊಟ್ಟಿತ್ ।
ಮೊದ್ಮಜ ಕಡೆಗೂ ಜೈಲಿಗೆ ಹೋತ್ ॥೫॥

ಮೊದೊಳ್ಗೆ ಗೂಡೆನು ಮೊದ್ವೆನು ಮುರ್ತ್ ।
ಮೊದ್ವೆನ ಪ್ರಾಯನು ಆಗಾಳೆ ಕಳ್ತ್ ॥
ಇನ್ನ್ ಬೇಡಾನಂಗೆ ಮೊದ್ವೆಂತ ಹೇಳ್ತ್ ।
ಮೊದ್ವೆನ ಆಸೆನ ಬುಟ್ಟೇ ಬುಡ್ತ್ ॥೬॥

*****

## ಸರ್ಕ್ಮಾರೆ

ಆಕರೆ ಈಕರೆ
ಹಳ್ಳಾನ ಹಾಂಗಾತ್
ಕೆಂಪುನ ನೀರ್
ಜಾಲಿಲಿ ತುಂಬಿತ್ತ್

ಗುಡ್ಗುನು ನಿಂತತ್
ಮಿಂಚಿನು ಹೋತ್
ಮಳೆನು ನಿಂತತ್
ಭೂಮಿ ತಂಪಾತ್
ಮಕ್ಕ ಎಲ್ಲ ಎದ್ದೊ
ಜಾಲಿಗೆ ಬಂದೊ
ನೀರ್‌ನ ನೋಡ್ದೊ
ಕಾಗ್ದನ ಹರ್ದೊ
ದೋಣಿನ ಮಾಡ್ದೊ
ನೀರ್‌ಲಿ ಬುಟ್ಟೊ
ಉರ್ಡಿಕಂಡ್ ಉರ್ಡಿಕಂಡ್
ಆಟನು ಆಡ್ದೊ

ಕೋಲ್‌ನ ಹಿಡ್ಕಂಡ್
ಅವ್ವನು ಬಾತ್
ಮಕ್ಕಳ ಬೆನ್ನಿಗೆ
ರಪ ರಪ ಬಾರ್ಸಿತ್
ಎದ್ದ್‌ಕಂಡ್ ಬಿದ್ದ್‌ಕಂಡ್ ಮಕ್ಕ ಎಲ್ಲ ಓಡ್ದೊ.

*****

ಪ್ರಾಯದ ಗೂಡೆಗೆ ಗಂಡ್‌ನ ಹುಡ್ಕಿಕೆ
ಹೆಸ್ರ್‌ನ ಕೊಡಿ ನೀವು ಮಾಡ್ಯೋಳೊ ವೇದಿಕೆ
ಬೇಗಾನೆ ನಿಮ್ಮಾ ಮಕ್ಕಾಳಿಗೊಂದೂ
ಮೊದ್ವೆನ ಮಾಡಿ ಬಾಳ್‌ನ ಕೊಡಿನಿ ॥೬॥

ಓ ಅಕ್ಕ, ಓ ಅಣ್ಣ ನೀವೂನು ಬನ್ನಿ
ಕೊಡಿಯಾಲ ಬೈಲ್‌ನ ಗೌಡ್ರಾ ಸಭೆಗೆ
ಅಜ್ಜಪ್ಪ, ಉಗ್ಗವ ಎಲ್ಲೋವು ಬರೊಕು
ಮಾಡ್ಡ ಅಡ್ಗೆನಾ ಹೊಟ್ಟೆ ತುಂಬಾ ತಿನೊಕು ॥

ತಿಂಬೊವ್‌ಕೆ ಉಟ್ಟು ಕೋಳಿಗೈಪು ಹುಗ್ಗಿ
ತಿನದವ್ಕ್ ಉಟ್ಟು ಬದಾನೆ–ನುಗ್ಗೆ
ಸುರಿವಷ್ಟ್ ಪ್ಯಾಸ ಕುಡಿವಷ್ಟ್ ಮೊಜ್ಜಿಗೆ
ಕಾಸಿದ ಬಾಳೆಕ್ಯಾ ಪೋಡೀನು ಉಟ್ಟು ॥೭॥

ಜಾತಿ ಮಕ್ಕಾ ಎಲ್ಲ ಒಟ್ಟಿಗೆ ಕೂಡಿಕಂಡ್
ಅರೆಭಾಷೆ ಯಾಗೋಳು ಮಾತಾಡೊಕು
ಗೌಡ ಜನಾಂಗದ ಉದ್ಧಾರ ಮಾಡಿ
ನಾವೆಲ್ಲ ಅದ್ ದೊಡ್ಡ ಹೆಮ್ಮೆನೆ ನೋಡಿ ॥೮॥

ಜಾತಿ ಮಕ್ಕಾ ನಾವು ನಮ್ಮ ಏಳಿಗೆಗೇ
ಎಲ್ಲೋವು ಕೂಡಿ ಕಂಡ್ ಒಟ್ಟಾಗಿ ದುಡ್ಯೋಕು
ದೇಶ–ಪರದೇಶಲಿ ಗೌಡ್ರ್‌ಗ ಮೆರ್‍ಯೋಕು
ತಿರುಪತಿ ತಿಮ್ಮಪ್ಪ ನಾವ್ಗೆಲ್ಲಾ ಹರ್ಸೋಕು ॥೯॥

*****

# ಪ್ರಾರ್ಥನೆ

ಕೈಮುಗ್ದ್ ಬೇಡಿಕೊಮ್ಮೊ
ಗಣಪತಿ ದೇವ್ರುನಾ

ಕಷ್ಟನಷ್ಟ ಬಾರದಂಗೆ
ಇಷ್ಟ ಸಿದ್ಧಿ ಕೊಡುವ ಹಾಂಗೆ
ಗೌರಿ ಮಜನ ಕೇಳಿಕೊಮ್ಮೊ
ಕೈಮುಗ್ದ್ ಬೇಡಿಕೊಮ್ಮೊ ಗಣಪತಿ ದ್ರೇವ್ರ್‌ನಾ

ಎಲಿನ ಬೆನ್ನ್‌ಲಿ ಕುದ್ದವಂಗೆ
ಕೈಲಿ ಪಾಶ ಹಿಡ್ದವಂಗೆ
ಮೈಲಿ ಹಾವು ಸುತ್ತಿದವಂಗೆ
ಕೈಮುಗ್ದ್ ಬೇಡಿಕೊಮ್ಮೊ ಗಣಪತಿ ದ್ರೇವ್ರ್ ನಾ

ಗೌಡ ಜನಾಂಗದ ಏಳಿಗೆಗೆ
ಹತ್ತ್ ಕುಟುಂಬ, ಹದ್ನೆಂಟ್ ಗೋತ್ರದ
ಜಾತಿ ಮಕ್ಕ ನಾವು ನಿಂಗೆ
ಕೈ ಮುಗ್ದ್ ಬೇಡಿಕೊಮ್ಮೊ ಗಣಪತಿ ದ್ರೇವ್ರು ನಾ

ಇಂದ್ ನಾವು ಬಂದ್ ಇಲ್ಲಿ
ಚೆಂದಲಿ ಸಭೆ ಸುರುಮಾಡ್ವೆ
ಕುಂದು ಕೊರ್ತೆ ಬಾರದಾಂಗೆ
ನೀನೆ ನಮ್ಮ ಕಾಯೊಕು. ಕೈಮುಗ್ದ್ ಬೇಡಿಕೊ
ಮ್ಮೊ ಗಣಪತಿ ದೇವ್ರ್ ನಾ

*****

# ಬಾನಜ್ಜ ಗುಡ್ಗೀತ್

ಬಾನಜ್ಜ ಗುಡ್ಗಿತ್
ಭೂಮಿನು ನಡ್ಗಿತ್
ಆಗಾಗ ಮಿಂಚಿನು
ಫಳ್ಳಂಗೆ ಮಿಂಚಿತ್
ಗುಡ್ಗಜ್ಜನ ಆರ್ಭಟೆ
ಜೋರ್ ಜೋರಾತ್

ಮಕ್ಕಂಗ ಹೆದ್ರಿ
ಗುಡಿ ಹೊದ್ದ್ ಮೊಲ್ಲಿದೊ
ದನಂಗೆಲ್ಲ ಓಡೋಡಿ
ಹಟ್ಟಿಗೆ ಬಂದೊ
ಬಾಗಿಲ್, ಕಿಡ್ಕೆಗ
ತಟಪಟ ಬಡ್ಕೊಂಡೊ
ಕಬ್ಬಿಣದ ಕತ್ತಿನ
ಜಾಲಿಗೆ ಇಟ್ಟೊ
ಸೋರುವ ಕಡೆಗೆಲ್ಲ
ಪಾತ್ರನ ಇಟ್ಟೊ

ಬಾನ್ ತೂತಾದಂಗೆ
ಜೋರ್‌ಂದ ಮಳೆಬಾತ್
ಗಾಳಿನ ರಭಸಕ್ಕೆ
ಗಿಡ ಮರ ಅಲ್ಲಾಡ್ತ್
ಕಸ ಕಡ್ಡಿ ಮಣ್ಣೆಲ್ಲ
ನೀರಿಲ್ಲ ಕೊಚ್ಚಿಹೋತ್

# ಬೊಳ್ಪುನ ತಿರ್ಗಾಟ

ದಾರಿಲಿ ಬಿದ್ದರೆ ಎತ್ತೋವು ಯಾರ್
ಬೊಳ್ಪುನ ತಿರ್ಗಾಟ ನಿಲ್ಸೋಕು
ಸೊಂಟಾನು ಹಿಡ್ದಾದೆ ಕಾಲ್‌ನು ಕೋಸಿದೆ
ನಡ್ಯದೆ ಇದ್ದರೆ ಆದುಲ್ಲೆ

ಈ ಬೇನೆ ಬೇಸಾರ ಯಾಗೋನೊ ಮುಗ್ಯೋದು
ಯಾರಲ್ಲಿ ಹೇಳೊಕು ಗೊತ್ತಾದುಲ್ಲೆ
ಐಯ್ಯನ ಬಂಡೆ ಏನ್ ಮಾಡ್ಡೊ ಈಗ
ಬೇನೆನ ತಿನದೆ ಉಪಾಯ ಇಲ್ಲೆ

ಪ್ರಾಯ ಹೋದಾ ಮೇಲೆ ಬೊದ್ಕುದು ಕಷ್ಟಾ
ನೋಡಿಕೆ ಯಾರಿಲ್ಲೆ ಪ್ರಾಣನು ಹೋದುಲ್ಲೆ
ಮಾಡಿದ ಕರ್ಮಾ ತೀರದೆ ಸಾವುನು
ಬೇಗಾನೆ ಬಾಕಿಲ್ಲೆ ಏನ್ ಮಾಡ್ಡೀಗ ?

*****

# ಸ್ವಾಗತ ಗೀತೆ

ಸ್ವಾಗತ ಸ್ವಾಗತ ಸ್ವಾಗತ ಹೇಳೂವೆ
ಪ್ರೀತಿಂದ ನಾವೂ ಸ್ವಾಗತ ಕೋರುವೆ

ಹತ್ತ್ ಕುಟುಂಬಾದ ಹದ್ನೆಂಟ್ ಗೋತ್ರಾದ
ನೆಂಟ್ರೆಲ್ಲ ಬನ್ನಿ ಕೈಮುಗ್ದ್ ಕರ್ದಾವೆ
ನೀರೂನೂ ಕೊಟ್ಟಾವೆ ಮೊಂದ್ರಿನು ಹಾಕೂವೆ
ಬೇಕಾರೆ ಕುದ್ರಿಕೆ ಕುರ್ಚಿನು ಉಟ್ಟು ॥ ಸ್ವಾಗತ॥

ಬೆಲ್ಲಾದ ಪಾನಕ ಕುಡಿವಸ್ಟ್ ಉಟ್ಟು
ಬೇಡದವ್ಕೆ ನೀರ್ ಮೊಜ್ಜಿಗೆ ಉಟ್ಟು
ಎಲಾಡ್ಕೆ ಹರ್ವಾಣ ಎದ್ರ್‌ಲಿ ಉಟ್ಟು
ತಿಂಬೌಕೆ ಹೊಸೆಪುನು ಅದ್ರಲಿ ಉಟ್ಟು ॥ ಸ್ವಾಗತ ॥

ಅಕ್ಕಾಂಗ ಎಲ್ಲಾ ಈ ಕಡೆ ಬನ್ನಿ
ಅತ್ತಿಗೆ–ನಾದ್ನಿಕ ನಿಮ್ಮನೆ ನೋಡಿವೆ
ಚಿಕ್ಕವ್ವ, ದೊಡ್ಡವ ನಿಮ್ಮನೆ ಹುಡ್ಕುವೆ
ಅಕ್ಕಾ–ತಂಗೆಕ ದಾರಿನ ಕಾದವೆ ॥ಸ್ವಾಗತ॥

ಅಣ್ಣಾಂಗ ಎಲ್ಲಾ ಆಕಡೆ ಹೋಗಿ
ನಿಮ್ಮಾ ನೆಂಟ್ರ್‌ಗ ಕಾದುಕೊಂಡೊಳೊ
ಸಣಪ, ದೊಡಪ ಕುದ್ದ್ ಕೊಂಡೊಳೊ
ಬಾಯ್ತುಂಬ ಎಲಾಡ್ಕೆ ತಿಂದ್ ಕೊಂಡೊಳೊ ॥ ಸ್ವಾಗತ ॥

ನೆರ್ಳ್‌ಗೆ ಬನ್ನಿ, ಬಿಸ್ಲಿಲಿ ನಿಲ್ಬೇಡಿ
ನೀವ್ಗಾಗಿ ಶಾಮ್ಯಾನ ಹಾಕೊಳೊ ನೋಡಿ
ಎಲ್ಲೋವು ಒಟ್ಟಿಗೆ ಕುದ್‌ಕಂಡ್ ನೀವು
ಗೌಡರ ಮಕ್ಕಾಳ ಗದ್ದಾಳ ನೋಡಿ ॥ ಸ್ವಾಗತ॥

ವೇದಿಕೆ ಮೇಲಿದ್ದ ಯಜಮಾನ ಗೌಡ್ರಿಗೆ
ಸ್ವಾಗತ, ಸ್ವಾಗತ, ಸ್ವಾಗತ ಹೇಳೂವೆ
ಹಗ್ಲಿರ್ಳ್ ದುಡ್ಡಾ ಹೆಣ್ಣ್–ಗಂಡ್‌ಗಳಿಗೆ
ಪ್ರೀತಿಂದ ನಾವೂ ಸ್ವಾಗತ ಕೋರುವೆ ॥ ಸ್ವಾಗತ ॥

ಹಾಡುವ, ಕುಣಿವಾ ಗೂಡೆ–ಹೈದಂಗಳಿಗೆ
ಆಟೋಟ ಸ್ಪರ್ಧೆಲಿ ಸೋತು–ಗೆದ್ದವ್ಕೆ
ಊಟ ಉಪಚಾರಲಿ ಕಷ್ಟಾ ಪಟ್ಟವ್ಕೆ
ವಾಹನ ಸೌಕರ್ಯ ಒದಗಿಸಿದಕ್ಕೆ ॥ ಸ್ವಾಗತ ॥

ಗ್ರಾಮದ ನಗರದ ಘಟಕದ ಗೌಡ್ರಿಗೆ
ದಾರಿ ತೋರ್ಸಿದ ಹಿರಿತಲೆ ಗೌಡ್ರಿಗೆ
ಊರು ಪರವೂರಿಂದ ಬಂದಂತ ಗೌಡ್ರಿಗೆ
ಕೈಮುಗ್ದ್ ತಲೆಬಾಗಿ ಸ್ವಾಗತ ಕೋರುವೆ ॥ ಸ್ವಾಗತ ॥

ದೇಶ–ಪರದೇಶದ ನೆಂಟ್ರಲ್ಲಾ ಬಂದೊಳೊ
ಕೊಡಿಯಾಲ ಬೈಲಿನ ಗೌಡರ ಸಭೆಗೆ
ಇಂದ್ ನೀವೆಲ್ಲಾ ಬಂದ್ ಸೇರ್‍ಯೋಳರಿ
ಚೆಂದಲಿ ಸಭೆಲಿ ಕುದ್ದ್‌ಕೊಂಡೊಳರಿ
ನೀವ್ಗೆಲ್ಲ ಇನ್ನೊಮ್ಮೆ ಸ್ವಾಗತ ಕೋರುವೆ ॥ ಸ್ವಾಗತ ॥

*****

# ಆಸೆ ನೀರಾತ್

ಎಸ್ಟ್ ಆಸೆ ಇಟ್ಟ್‌ಕಂಡೆ
ನಿಮ್ಮ ಒಟ್ಟಿಗೆ ಸೇರೋಕೂಂತ
ಕಷ್ಟಪಟ್ಟ್ ಹೊರ್ಟ್ ನಿಂತೆ
ನಂಗೆ ಬಾಕೆ ಆತಿಲ್ಲೆ

ನೀವು ನನ್ನ ದಾರಿ ಕಾದ್
ನನ್ನ ನೆಂಪು ಮಾಡ್ವೋರೀಂತ
ನಂಗು ಬಾಕೆ ಆಸೆ ಇತ್ತ್
ಬಾರದಾಂಗೆ ಆಗಿ ಹೋತ್

ನಾನ್ ಬರ್ದ ಪದ್ಯ ಹಾಡ್ದ
ನಿಮ್ಮ ದನಿನ ಕೇಳೋಕೂಂತ
ನಂಗು ಆಸೆ ಬಾಳ ಇತ್ತ್
ನಂಗೆ ಬಾಕೆ ಆತಿಲ್ಲೆ

ನನ್ನ ಪದನ ಹಾಡಿಕನ
ಅದರ ಪೊರ್ಲು ಕೇಳೋಕೂಂತ
ಹತ್ತ್ ದಿನಂದ ಕನ್ಸ್ ಕಂಡೆ
ನಂಗೆ ಬಾಕೆ ಆತಿಲ್ಲೆ

ಅದರ ನೆಂಪು ಮರ್‍ಯೊಕೂಂತ
ಪದನ ಬರ್ದ್ ಬರ್ದ್ ಕಂಡ್
ಕನ್ಸ್ ನೆನ್ಸ್ ಮಾಡಿಕಂಡೆ
ನಂಗೆ ಬಾಕೆ ಆತಿಲ್ಲೆ

*****

## ಸಿರ್ಮಾರೆ

ಬೀಜನ ಹೆರ್ಕಿಕೆ ಬೀಜದ ಕೊಚ್ಚಿಗೆ
ಒಟ್ಟಿಗೆ ಹೋಗ್ತಿದ್ದೆ
ಕೈತುಂಬ ಬಳೆನ ಬಳೆಗಾರ ಬಾಕನ
ಇಸಿದ್ ಕಳ್ಸ್ತಿದ್ದೊ
ಸೊಪ್ಪುಗೆ ಹೋಕನ ಅತ್ತಿಗೆಕ ಇಬ್ಬೊರು
ನಾನೂ ಹೋಗ್ತಿದ್ದೆ
ಸೊಪ್ಪುನ ತಲೆಗೆ ಹೊರ್ಸಿದ ಹೊರೆನ
ದಾರಿಲಿ ಬೀಳ್ಸ್ತಿದ್ದೆ

ಚೋಡ್‌ನ ಮೀನ್, ಮೊರಂಟೆ ಎಲ್ಲಾ
ಹಿಡ್ದ್ ತರ್ತಿದ್ದೊ
ಹುಳಿ ಮೆಣ್ಸ್ ಕಡ್ದ್ ಕೊದ್ಯಕೆ ಇಟ್ಟ್
ಸಾರ್‌ನ ಮಾಡ್ತಿದ್ದೊ
ಅಮಾಸೆ ಇರ್ಳಿಲಿ ಮಾವನು ಬಾವನು
ಬೇಟೆಗೆ ಹೋಗ್ತಿದ್ದೊ
ಬೆಡಿಲಿ ಹೊಡ್ದ್ ಪಾಂಜನ ಬರಿಕನ
ಮನೆಗೆ ತರ್ತಿದ್ದೊ
ಹಜಿರ್ ಮಾಡಿ ಅಳಗೆಲ ಮಾಸನ
ಗೈಪುನ ಮಾಡ್ತಿದ್ದೊ
ಅಪ್ಪದ ಹಿಟ್ಟ್‌ನು, ಪುಂಡಿನು ಮಾಡಿ
ಒಟ್ಟಿಗೆ ಉಂಬತಿದ್ದೊ
ನೆಂಟ್ರೆಲ್ಲ ಬಾಕನ ಕಟ್ಟಿ ಹಾಕಿದ
ಹುಂಜನ ಕೊಲ್ತಿದ್ದೊ
ಸಮ್ಮಾನ ಮಾಡಿ ಗಡ್ಡ್‌ಲಿ ಅವ್ಕೆಲ್ಲ
ಊಟನು ಹಾಕ್ತಿದ್ದೊ.

# ಬ್ರಹ್ಮ ಗಂಟ್

ಮೆಳ್ಳೆಗಣ್ಣ್‌ನ ನಣ್ಣ್‌ನ ಮೊದ್ವೆಗೆ
ನಾನೂ ಉಗ್ಗವ ಹೊರ್‍ಟೊಗಡಾ
ನಡ್ಗುವ ನಡಿಗೆನ ಉಗ್ಗವ ಹಿಡ್ದಿತ್ತ್
ಊರುವ ಕೋಲ್‌ನ ಕೈಲಿಗಡಾ
ಮಾರುದ್ದ ನಡೆಕನ ದಾರಿಲಿಕುದ್‌ಕಂಡ್
ಉಗ್ಗವ ಬರ್‍ತಿತ್ತ್ ಪಿಜಿನ್ ಹರ್‍ದಾಂಗೆ
ಓಡುವ ನಡಿಗೆಲಿ ನಡ್ಕಂಡ್ ಹೋಗಿನಾ
ಕುದ್‌ಕಂಡ್ ಕಾಯ್ತಿದ್ದೆ ಉಗ್ಗವನಾ
ಬೊಳ್ಪುಗೆ ಹೊರ್‍ಟೊವು ಹಿಂಬೊತ್ ಆಕನ
ಹೆಂಗಾರ ಮುಟ್ಟಿದೊ ಅತ್ತೆನ ಮನೆನ
ಜಾಲ್‌ನ ಚಪ್ಪರ ದೂರಕೆ ಕಾಂಬತಿತ್ತ್
ವಾಲಗ ಸದ್ದುನು ಜೋರಾಗಿ ಕೇಳ್ತಿತ್ತ್
ನೀರ್‌ನ ಚೊಂಬುನ ಕೈಲಿ ಹಿಡ್ಕಂಡ್
ಉಗ್ಗವನ ಮಗ್ಳ್ ಓಡ್ಯೋಡಿ ಬಾತ್
ನೇರಲಿ ನಂಗದ್ ಅತ್ತೆನು ಹೌದು
ಅದರ ಮಂಜನೆ ನಣ್ಕನು ಹೌದು
ನಮ್ಮನೋಡಿ ನಣ್ಕಂಗೆ ಭಾರಿ ಕುಸಿಆತ್
ಕುರ್ಚಿಲಿ ಕುದ್ರಿಸಿ ಉಪಚಾರ ಮಾಡ್ತ್
ಮೊದೊಳ್ಗೆ ಗೂಡೆನು ಭಾರಿ ಪೊರ್ಲು ಇತ್ತ್
ನೋಡಿಕನ ಒಂದ್‌ಕಾಲ್ ಕುಂಟುನು ಆಗಿತ್ತ್
ಮೆಳ್ಳೆಗಣ್ಣ್‌ನ ಹೈದಂಗೆ ಕುಂಟು ಗಾಲ್ನ ಗೂಡೆ
ಈಡ್ ಜೋಡಿನು ಪಸಂದ ಇತ್ತ್
ಬೇರೇನ್ ಮಾಡ್ದು ದೇವರ ಲೀಲೆ
ಬ್ರಹ್ಮನ ಗಂಟ್‌ನ ತೊಪ್ಪಿಸಿಕೆ ಆದುಲ್ಲೆ

*****

# ಅಕ್ಕನ ಮನೆ

ಸೋದರ ಮಾಂವನ ಮಂಜಂಗೆ ನನ್ನ
ಅಕ್ಕನ ಕೊಟ್ಟಿತ್ತ್
ಮೊದುವೆ ಆಕನ ಕಿಟ್ಟು ಬಾವಂಗೆ
ಸಣ್ಣ ಜುಟ್ಟಿತ್ತ್
ಮನೆಗೆ ಬಾಕನ ಜುಟ್ಟುನ ಬಿಚ್ಚಿ
ಬೆಳ್ಚೆಲ್ ಮಾಡ್ತಿದ್ದೆ.
ಬೆರ್ಸಿಕಂಡ್ ಬಂದ್ ಬಾವ ನಂಗೆ
ಬೆನ್ನಿಗೆ ಬಾರ್ಸ್ತಿದ್ದೊ.
ನಾಕ್ ವೊರ್ಸದ ಕೂಸುನಾನ್
ಕೈಗೆ ಸಿಕ್ತಿತ್ಲೆ
ಹಕ್ಕಲೆ ಹೋಕನ ಬೆತ್ತನ ತೋರ್ಸಿ
ಹೆದ್ರಿಸಿ ಓಡ್ಸ್ ತಿದ್ದೊ
ಬಾವನ ಹೆಗ್ಲ್‌ಲಿ ಕುದ್ದ್ ಅಕ್ಕನ
ಮನೆಗೆ ಹೋಗ್ತಿದ್ದೆ
ಬಸ್‌ನು ಇಲ್ಲೆ ನಡ್ಯೋದು ಕಷ್ಟ
ಹಟನ ಮಾಡ್ತಿದ್ದೆ

ಬಾವನ ಮನೆಲಿ ಒಣ್ಕ್‌ಲಿ ಮೀಯೊಕು
ನಂಗದ್ ಗೊತ್ತಿಲ್ಲೆ
ನೀರ್‌ನ ತರೊಕು ಕಂದಲ್ ಹಿಡ್ಕಂಡ್
ಅದುನು ಆಕಿಲ್ಲೆ.
ಅತ್ತಿಗೆಕ ಇಬ್ಬೋರು ನನ್ನ ಕರ್‌ಕಂಡ್
ನೀರೆಡಿಗೆ ಹೋಗ್ತಿದ್ದೊ
ಒಲೆಗೆ ಹಾಳೆನ ಮಡ್ಲ್‌ನ ಒಟ್ಟಿ
ನೀರ್‌ನ ಕಾಸ್‌ತಿದ್ದೊ
ಕಾದ ನೀರ್‌ನ ಒಣ್‌ಕಲಿ ತೆಗ್ದ್
ತಲೆಗೆ ಹೊಯ್ತಿದ್ದೊ
ಸೀಗೆ ಹೊಡಿನ ತಲೆಗೆ ಹಾಕಿ
ಗಸಗಸ ತಿಕ್‌ತಿದ್ದೊ
ಕಣ್ಣ್‌ನ ಉರಿಲಿ ಬೊಬ್ಬೆಹಾಕಿ
ಕೈಕಾಲ್ ಬಡಿತಿದ್ದೆ
ಮಂಜಣೆ ಮಾಡಿ ಅತ್ತಿಗೆಕ ನನ್ನ
ಮೊಸಿ ಕಳ್ಸ್‌ತಿದ್ದೊ

ಚೊಂಟೆನ ಮೊಗ್ಚಿ ನೀರ್‌ನ ಹಾಕಿ
ನೆಟ್ಟಿಕ್ಯಾ ಬೆಳ್ಸ್‌ತಿದ್ದೊ
ಹಿತ್ಲ್‌ಗೆ ಹೋದರೆ ಸೋಂತೆ ಮಿಡಿನ
ತಿಂಬಕೆ ಕೊಡ್ತಿದ್ದೊ
ಅಕ್ಕನು ಬಾವನು ಕರ್‌ಕಂಡ್ ನನ್ನ
ಬೈಲಿಗೆ ಹೋಗ್ತಿದ್ದೊ
ಚಾಳೆಂದ ಬೆಂಡನ ತೆಗ್ದ್ ಅದರ
ಕುಡ್ಯಕೆ ಕೊಡ್ತಿದ್ದೊ

ಸೋಬಾನೆ ಹಾಡಿವೆ
ಕೇಳಿನಿ ನೀವೀಗಾ
ಮೂರ್ ನಿಮ್ಸಲಿ ಸೋಬಾನೆ ಹಾಡ್‌ನ
ಹೆಣ್ಮಕ್ಕ ಹಾಡಿವೆ

ಅರ್ಸಿಣ ಎಣ್ಣೆ, ಮೊದ್ರಂಗಿ ಶಾಸ್ತ್ರ
ಬಾಗಿಲ್ ತಡಿವ ಸೋಬಾನೆ ಹಾಡ್
ಹೆಣ್ಣ್ ಇಳ್ಸುವ ಸೋಬಾನೆ ಪದಗ
ಭಾರಿ ಪೊರ್ಲ್ಲು, ಕೇಳಿಕು ಕುಸಿನು
ಹೇಳೊವು ಮಾತ್ರ ಕಮ್ಮಿ ಜನ
ಕೇಳಿನಿ ನೀವೀಗಾ ॥೬॥

ರಂಗೋಲಿ ಬರ್ದವೇ
ಬಂದ ಗೂಡೆಗಾ
ಬಣ್ಣ ಬಣ್ಣದ ರಂಗೋಲಿ ಹೊಡಿಲಿ
ರಂಗೋಲಿ ಹಾಕಿವೆ

ಕೈನ ಚಳಕ ಅದರ್ಲಿ ಉಟ್ಟು
ಚುಕ್ಕಿ ಇಸಿ, ಗೆರೆನ ಎಳ್ದ್
ರಂಗೋಲಿ ಬುಡ್ಸಿ, ಬಣ್ಣ ತುಂಬಿ
ಪೊರ್ಲ್ಲು ಚಿತ್ರ ಬರ್ಯಕನ
ಬಂದ ಜನಂಗ ಅದರ ನೋಡಿ
ಕಣ್ಣ್ ತುಂಬಿವೇ ॥೭॥

ಮೊದ್ರಂಗಿ ಹಾಕಿವೇ
ಕೈಗೆ ಗೂಡೆಗಾ
ಸೂರ್ಯ–ಚಂದ್ರ ಚಿತ್ರ ಬುಡ್ಸಿ
ಬಣ್ಣ ಬರ್ದವೇ

ವಾರಕೆ ಒಮ್ಮೆ ಸಾಲೆಲಿ ನಡಿವ
ಭಜನೆಗೆ ಹೋಗ್ತಿದ್ದೊ
ಬಾಕನ ನಿದ್ದೆಲಿ ಮೊಲ್ಗಿದ ನನ್ನ
ಚೆಚ್ಚಿಕಂಡ್ ಬಾತಿದ್ದೊ
ಬೊಳ್ವುಗೆ ಎದ್ದ್ ತೋಟಲಿ ಇದ್ದ
ಕೆರೆಗೆ ಓಡ್ತಿದ್ದೆ
ಪೊರ್ಲುಲಿ ಅರ್ಳಿದ ತಾವರೆ ಹೂನ
ಕಣ್ತುಂಬ ನೋಡ್ತಿದ್ದೆ
ಗುಡ್ಡೆಲಿ ಇದ್ದ ಮಂಜೊಟಿ ಮರಂದ
ಮಂಜೊಟಿ ಹೆರ್‌ಕ್ತಿದ್ದೆ
ಊರಿಗೆ ಬಾಕನ ಜೋಬುನ ತುಂಬಾ
ತುಂಬಿಸಿ ತಾತಿದ್ದೆ
ರಜೇನ ಎಲ್ಲಾ ಅಕ್ಕನ ಮನೆಲಿ
ಮಜಾಲಿ ಕಳಿತಿದ್ದೆ

ಅಕ್ಕನ ಬುಟ್ಟ್ ಮನೆಗೆ ಬಾಕನ
ಬೇಜಾರಿಲಿ ಮೊರ್ಡ್ತಿದ್ದೆ
ಎಪ್ಪತ್ ವರ್ಸದ ಹಿಂದೆನ ಕತೆನ
ನೀವ್ಗೀಗ ಹೇಳಿನೆ
ಈಗಿನ ಮಕ್ಕಂಗೆ ಕೇಳಿನು ಗೊತ್ತಿಲ್ಲೆ
ಹಿಂದೆನ ಪರ್‌ಸಂಗ

*****

# ಆಟಿಹಬ್ಬ

ಬಂದ್ ಸೇರ್‍ರ್ಯೊಳೋ
ಆಟಿ ಹಬ್ಬಕೇ
ಜಾತಿ ಮಕ್ಕಾ ಎಲ್ಲಾ
ಇಲ್ಲಿ ಸೇರ್‍ರ್ಯೊಳೊ

ಸೀರೆ ಉಟ್ಟ್ ಪಂಚೆ ತೊಟ್ಟ್
ಜಾತಿ ಉಡ್ಗೆ ಉಟ್ಟ್ ಕಂಡ್
ಹೆಣ್ಣ್, ಗಂಡ್, ಮಕ್ಕ ಸೇರಿ
ಆಟಿ ಹಬ್ಬ ಮಾಡೊಕೂಂತ
ಮನೆಂದ ಗಡ್ಡ್‌ಲಿ ಹೊರ್‍ಟ್ ಬಂದ್
ಇಲ್ಲಿ ಸೇರ್‍ರ್ಯೊಳೊ ॥೧॥

ಆಟ ಆಡಿವೇ
ಗೂಡೆ ಹೈದಂಗಾ
ಚೆನ್ನ ಮಣೆ ಆಟ ಆಡಿ
ಗೆದ್ದ್ ಬುಟ್ಟವೇ

ಮೂಲೆ ಆಟ, ರಾಜ–ಮಂತ್ರಿ
ಬೆಳೆ–ಪೆರ್‍ಲೆ ಆಟ ಉಟ್ಟು
ಚೆನ್ನ ಮಣೆ ಗುಳಿಗೆ ಹಾಕಿವೆ
ಮಂಜೊಟಿಕ್ಯಾನ ನಾಕ್ ನಾಕ್
ಒಂದ್ ಸಾಲಿಲಿ ಏಳ್ ಗುಳಿ
ಒಟ್ಟ್ ಹದಿನಾಕ್ ಗುಳಿ
ಕುಸಿ ಕೊಟ್ಟದೇ ॥೨॥

ಅಡ್ಕೆ ಚೊಲ್ಲುವೇ
ಅಲ್ಲಿ ನೋಡಿನೀ
ಬೇಗ ಬೇಗ ಅಡ್ಕೆ ಚೊಲ್ಲಿ
ರಾಸಿ ಹಾಕಿವೆ

ದೊಡ್ಡ ರಾಸಿ ಆದವಂಗೆ
ಗೆದ್ದೆ ಎಂಬ ಪೋರ್ಸ್ ಬೇರೆ
ನೋಡಿದವ್ಕೆ ಅವನೆ ದೊರೆ
ಸೋತವಂಗೆ ಚಪ್ಪೆ ಮೋರೆ
ಜನರ ಎದ್ರ್ ಅವನೆ ಕುರೆ
ಅಗಿ ಬುಟ್ಟದೇ ॥೩॥

ಕಾಯಿ ಕುಟ್ಟುವೇ
ನಮ್ಮ ಹೈದಂಗಾ
ಬಾಯಿ ಬುಟ್ಟ್ ನೋಡಿ ಜನಂಗ
ನಿಂತ್ ಕೊಂಡೊಳೊ

ಕಾಯಿ ಕುಟ್ಟಿ ಒಡ್ದ್ ಹೋಕನ
ಒಡ್ದ ಕಾಯಿ ಹಿಡ್ದವಂಗೆ
ಭಾರಿ ಸೋಲ್ ಆತ್ಂತೇಳಿ
ಮೋರೆ ಕೆಳಗೆ ಹಾಕಿಕನ
ಗೆದ್ದವನೆ ದೊಡ್ಡ ಬಿರ್ಸ
ಅವನ ನೋಡಿ ಜನಕೆ ಹರ್ಸ
ಬೊಬ್ಬೆ ಹೊಡ್ದವೇ ॥೪॥

ಚೊಪ್ಪು ತೆಗ್ದವೇ
ಇಡೀ ಕಾಯಿನಾ
ಕತ್ತಿ ಕೈಲಿ ಎತ್ತಿ ಹಿಡ್ದ್
ಚೊಪ್ಪು ತೆಗ್ದವೇ

ಕೈಲೀ ಕತ್ತಿ ಎತ್ತಿ ಹಿಡ್ದ್
ಕಾಯಿ ಚೊಪ್ಪು ತೆಗ್ಯೊದು ಕಷ್ಟ
ಸುಲ್ದ ಕ್ಯಾನ ಲೆಕ್ಕಮಾಡಿ
ಹೆಚ್ಚ್ ಆದಂವ ಗೆದ್ದ್ ಬುಡ್ತ್
ಸೇರ್ದ್ ಜನಂಗ ಅವನ ನೋಡಿ
ಬೆನ್ನ್ ತಟ್ಟಿವೇ ॥೫॥

## ಸರ್ಕ್ಕಾರೆ

ಕೋೞಿಗಳ ಓಡ್ಸಿ ಹಿಡ್ದ್
ಹೊಟ್ಟೆ ತುಂಬ್ಸಿ ಕಂಡದೆ
ಸತ್ತ ಹೆಗ್ಣ ಕಚ್ಚಿ ತಂದ್
ಊರ್ ನಾತ ಮಾಡಿದೆ

ಹೆಣ್ಣ್ ನಾಯ್ನ ಕಾಂಬಕನ
ಮೂಸಿ ಮಂಜಣೆ ಮಾಡಿದೆ
ಗಂಡ್ ನಾಯ್ನ ಕಚ್ಚಿ ಓಡ್ಸಿ
ಬೀಲ ಕಚ್ಚಿ ಹಾಕಿದೆ

ಹಿಡ್ದ್ ಕಟ್ಟಿ ಹಾಕಿಕದ್
ಸಿಕ್ಕುದುಲ್ಲೆ ಓಡಿದೆ
ಹಡ್ಬೆ ನಾಯಿ ಆಗಿ ಹೋತ್
ಬೀದಿ ಪಾಲ್ ಆದದೆ

ಬೀದಿ ನಾಯ್ನ ಕೊಲ್ಲಿಕೇಂತ
ಪಂಚ್ಯಾತ್‌ನೋವು ಹಾಕಿದೊ
ಇಸ ಇದ್ದ ಅಂಬಡೆನ
ಕೊಟ್ಟ್ ಅದರ ಕೊಲ್ತಿದ್ದೊ

ಅಂಬಡೆನ ತಿಂದ್ ಅದ್
ಕೈಕಾಲ್ ಬುಟ್ಟ್ ಮೊಲ್ಗಿದೆ
ಸತ್ತ ನಾಯ್ನ ಎಳ್ಕೊಂಡೋಗಿ
ಗುಂಡಿಹಾಕಿ ಮುಚ್ಚಿದೊ

*****

ಮೊದ್ವೆ ಆಗದ ಗೂಡೆಗ ಹೈದಂಗ
ಬಲದ ಕೈಗೆ ಇಸಿಕೆ ಬೊತ್ತ್
ಮೊದ್ರಂಗಿ ಹಾಕಿರೆ ಕೈಗೆ ತಂಪು
ತಲೆಗೆ ಹಾಕಿ ನೆತ್ತಿಗೆ ತಂಪು
ಆಟಿ ತಿಂಗಳ ಕಿಚ್ಚ್ ಎಲ್ಲ
ಇಳ್ದ್ ಬುಟ್ಟದೇ ॥೮॥

ಮಕ್ಕ ಬಂದೊಳೊ
ಅವ್ಕನು ಮಾಡ್ಯೊಳೊ
ಬೇರೆ ಬೇರೆ ರೀತಿಲಿ ಅವ್ಕೆ
ಪಂದ್ಯ ಇಸ್ಯೊಳೊ

ಮಕ್ಕಳ ಆಟ ನೋಡಿಕೆ ಕುಸಿ
ಆಟ ಆಡಿ ಕುಣಿವ ಮಕ್ಕ
ಕಣ್ಣುಗೆ ಹಬ್ಬ ಮಾಡಿ ಬುಟ್ಟ್
ನೋಡೋವ್ಕೆ ಬಾಳ ಕುಸಿ ಕೊಟ್ಟ್
ಸೇರ್ದ ಜನಂಗ ಸಂತೋಸ ಪಟ್ಟ್
ಹಿಗ್ಗಿ ಬುಟ್ಟವೇ ॥೯॥

ಅಡ್ಗೆ ಮಾಡ್ಯೊಳೋ
ಉಣದೆ ಹೋಗ್ಬೋಡೀ
ಆಟಿ ಅಡ್ಗೆ ಭಾರಿ ರುಚಿ
ಉಂಡ್ ನೋಡಿನಿ

ಬೊಳ್ಪುನ ಕಾಪಿಗೆ ಮೂಡೆ ಹಿಟ್ಟ್
ಕಣ್ಣ ಚಾಯ ಕುಡ್ಯಕೆ ಉಟ್ಟು
ಕಣ್ಣ ಚಾಯ ಆದರು ಅದಕೆ
ನಿಂಬೆರಸ, ಶುಂಠಿ ಸೇರ್ಸಿ
ಮಾಡ್ದ ಚಾಯನ ಕುಡ್ದ್ ನೋಡಿ
ಲಾಯ್ಕ್ ಮಾಡ್ಯೋಳೊ ॥೧೦॥

## ಸಿರ್ಮಾರೆ

ಊಟ ಮಾಡೊಮೊ
ಆಟಿ ಅಡ್ಗೆನಾ
ಮನೆಂದ ಮಾಡಿತಂದ ಅಡ್ಗೆ
ಉಂಡ್ ನೋಡೊಮೋ

ಕ್ಕೊಸಲಕ್ಕಿನ ಹುಗ್ಗೆ ಒಟ್ಟಿಗೆ
ತಿಮರೆ, ಕುಡುನ ಪೊಜ್ಜಿ ಉಟ್ಟು
ಹಲ್ಸಿನಕ್ಕಿ, ಕಣಿಲೆಗೈಪು
ಕಡುಂಬು ಹಿಟ್ಟ್, ಆಟಿ ಪ್ಯಾಸ
ಚಗ್ಟೆ ಸೊಪ್ಪುನ ಉಪ್ಪುಕರಿ
ಕೆಸನ ಎಲೆನ ಪತ್ರೋಡೆ
ಯಾವ್ದು ಬೇಕ್ ತಿಂದ್ ನೋಡಿ
ನೀವ್ಗೆ ಬುಟ್ಟದ್ ॥೧೧॥

ಗೌಡ್ರ ಮಕ್ಕಳೇ
ಹೇಳಿ ಬುಡಿನಿ
ಆಟಿಹಬ್ಬ ಪದಕೇಳಿ
ನೀವ್ಗೆ ಕುಸಿ ಆತೊ ಹೇಳಿ

ವರ್ಸಕ್ಕೊಮ್ಮೆ ಬರುವ ಅಟಿ
ಬರುವ ವರ್ಸ ನಿಮ್ಮ ಭೇಟಿ
ಜಾತಿ ಮಕ್ಕ ಸೇರೊಮೊ
ಆಟಿ ಹಬ್ಬ ಮಾಡೊಮೊ ॥೧೨॥

*****

# ಹಡ್ಬೆ ನಾಯಿ

ಆಚೆ ಮನೆ ಕಾಳಪ್ಪಜ್ಜ
ನಾಯಿನೊಂದು ಸಾಕಿದೆ
ಯಾರ್ ಇಲ್ಲೆ ಅಂವಂಗೆ ಅದೆ
ಭಾರಿ ದೋಸ್ತಿ ಆದದೆ

ಬೊಳ್ಪುಗೆದ್ದ್ ಹೋಗಿ ಅದ್
ಊರು ತಿರ್‍ಗಿ ಬಂದದೆ
ಸಿಕ್ಕಿದರ ಕಚ್ಚಿ ಹಿಡ್ದ್
ಮನೆಗೆ ತಂದದೆ

ಊರು ತುಂಬ ಅದ್ರ ಕಾಟ
ಸಿಕ್ಕಿದವ್ಕೆ ಬೊಗ್ಳ್‌ದೆ
ಸಣ್ಣ ಮಕ್ಳ ಕಂಡರಂತ್
ಓಡಿ ಹೋಗಿ ಕಚ್ಚಿದೆ

ಊರ್ ಜನ ಎಲ್ಲ ಸೇರಿ
ಸಿಕ್ಕಿದಲ್ಲಿ ಬೊಡ್ದವೆ
ಮಕ್ಕ ಎಲ್ಲ ಅದ್ರ ಕಂಡ್ರೆ
ಹೆದ್ರಿ ನಡ್ಗಿ ಬುಟ್ಟವೆ

# ಚಂಗುಳಿ

ಚಂಗುಳಿ ಮಾಡಿಕೆ ಹಲ್ಸಿನ ಕಾಯ್ನ
ಬಂಗಲಿ ಕೊಯ್ದ್, ಗೂಂಜಿನ ತೆಗ್ದೆ
ಕೈಲಿ ಅಂಟಿದ ಮಾಯ್ಣನ ತೆಗ್ಯಕೆ
ಕೋಲ್ನ ಹುಡ್ಕೀದೆ, ನಾ ಕೋಲ್ನ ಹುಡ್ಕಿದೇ

ಮಾಯಣ ತೆಗ್ದ್, ಮಾಂಜೋಳು ಕೊಯ್ದ್
ತೋಳೆನ ಬುಡ್ಸಿ, ಬೀಜನತೆಗ್ದ್
ನೀರ್‌ಲಿ ತೊಳ್ದ ಹಲ್ಸಿನ ತೋಳೆನ
ಅಳೆಗೆಲಿ ಹಾಕಿದೆ, ನಾ ಅಳೆಗೆಲಿ ಹಾಕಿದೆ

ಹುಳಿ ಮೆಣ್ಸ್ ಕಾಯೆನ ಅರ್ರುನಕಡ್ದ್
ಅಳೆಗೆಲಿ ತೋಳೆನ ಒಟ್ಟಿಗೆ ಸೇರ್ಸಿ
ಉಪ್ಪುನ ಹಾಕಿ, ಕೊಡದ್ಯಕೆ ಇಟ್ಟ್
ಅಗ್ರಣೆ ಹಾಕಿದೆ, ನಾ ಅಗ್ರಣೆ ಹಾಕಿದೆ

ಒಂದೇ ಸೆಕೆಲಿ ಬೆಂದ ಚಂಗುಳಿ
ಬಿಸಿ,ಬಿಸಿ ಚಂಗುಳಿ ತಿಂದ್ ನೋಡಿ
ಬಾಯಿಲಿ ನೀರ್ ಬಂದದೆ ನೋಡಿ
ತಿಂದರೆ ಬುಡಿಕಿಲ್ಲೆ, ನೀವು ತಿಂದರೆ ಬುಡಿಕಿಲ್ಲೆ

*****

# ಗೌಡ್ರಾ ಹೆಣ್ಮಕ್ಕ ನಾವು

ಗೌಡ್ರಾ ಹೆಣ್ಮಕ್ಕ ನಾವು
ಒಂದಾಗಿ ಕೊಡ್ಯೊಳೊ
ಜಾತಿಲೀ ಹೆಸ್ರ್‌ನಾ
ನಾಕ್ ದಿಕ್ಕ್‌ಲಿ ಮಾಡ್ಯಾಳೊ

ಕಡೆಕೊಡಿ ಕೆಲ್ಸ ಮುಗ್ಸಿ
ಹೊಡಿ ಮಕ್ಕಳ ಕಟ್ಟಿಕಂಡ್
ಇಡೀ ದಿನ ಕಳ್ಯೊಕೂಂತ
ಕೊಡಿಯಾಲ ಬೈಲ್‌ಗೆ
ಕೊಡಿಯಾಲ ಬೈಲಿಗೆ
ಗಡಿ ಬಿಡಿ ಮಾಡಿಕಂಡ್
ಮಡಿಸೀರೆ ಉಟ್ಟ್‌ಕಂಡ್
ಗೌಡ್ರಾ ಹೆಣ್ಮಕ್ಕ ನಾವು
ಗಡ್ದ್‌ನ ಸಮ್ಮೇಳನಕ್ಕೆ
ಸಡ್ಗರಲಿ ಬಂದೊಳೊ
ಸಡ್ಗರಲಿ ಬಂದೊಳೊ ॥ಗೌಡ್ರಾ॥

ಹತ್ತ್ ಕುಟುಂಬಾ
ಹದ್ನೆಂಟ್ ಗೋತ್ರದಾ
ಗೌಡ್ರಾ ಹೆಣ್ಮಕ್ಕ ನಾವು
ಗೌಡ್ರಾ ಹೆಣ್ಮಕ್ಕ ನಾವು
ಕೆಲ್ಸಲಿ ಹಿಂದೆ ಸರ್ಯಕಿಲ್ಲೆ॥ಗೌಡ್ರಾ॥

ಮಾತ್‌ಲಿ ನಾವು ಸೋಲಿಕಿಲ್ಲೆ
ಸತ್ಯ, ಧರ್ಮ,ನ್ಯಾಯ ನೀತಿಲಿ

ಬಾಳಿ ಬೊದ್ಕುವ ಹೆಣ್ಣ್‌ಗಾ
ಯಾರಿಗು ನಾವು ಹೆದ್ರಿಕಿಲ್ಲೆ
ಎದೆಲಿ ದಾರಿ ಕೊಡೊವು
ಎದೆಲಿ ದಾರಿ ಕೊಡೊವು ॥ಗೌಡ್ರಾ॥

ಓದು, ಬರಹ,ಹಾಡ್, ಹಸೆಲಿ
ಯಾರಿಗೆ ನಾವು ಕಮ್ಮಿ ಇಲ್ಲೆ
ಕುಣ್ತ, ನಾಟಕ, ಆಟ, ಓಟಲಿ
ಎಲ್ಲರ್‌ಂದ ಮುಂದೆ ಒಳೊ
ಗಂಡ್‌ಗಳಿಗೆ ಹೆಗ್ಲ್ ಕೊಟ್ಟ್
ದುಡ್ಡ್ ಮಕ್ಕಳ ಸಾಕೋವು
ಎಲ್ಲರೊಟ್ಟಿಗೆ ಸೇರಿಕಂಡ್
ಎಜಮಾನ್ಕೆ ಮಾಡೊವು
ಎಜಮಾನ್ಕೆ ಮಾಡೊವು॥ಗೌಡ್ರಾ॥

ಹಬ್ಬ, ಹೊಸ್ರ್, ಕೆಡ್ಡಸ, ಬಿಸುಲಿ
ಗಡ್ದ್‌ನ ಅಡ್ಗೆ ಮಾಡೊವು
ಬಂದೊವ್ಕೆಲ್ಲ ಉಪಚಾರ ಮಾಡಿ
ಹೊಟ್ಟೆ ತುಂಬ ತಿನ್ಸೊವು
ಮೊದ್ವೆ, ಬಯ್ಕೆ, ಸಾವು, ನೋವುಲಿ
ಇರ್ಕ್ಯ, ಹಗ್ಲ್ ದುಡ್ಯೊವು
ನೆರೆಕರೆವ್ಕೆ ಸಾಯ ಮಾಡಿ
ಒಗ್ಗಟ್ಟ್‌ಲಿ ಬೊದ್ಕೊವು
ಯಾರಿಗು ನಾವು ಕಮ್ಮಿ ಇಲ್ಲೆ
ಯಾರಿಗು ನಾವು ಕಮ್ಮಿ ಇಲ್ಲೆ ॥ಗೌಡ್ರಾ॥
ಕುಂರ್ಜೆ ಜಾನಕೀ ಅಕ್ಕ

ಊರ್‌ಬೈಲ್ ಪದ್ಮಾವತ್ಯಕ್ಕ
ಮೋಂಟಡ್ಕದ ಮುತ್ತಮ್ಮಕ್ಕ
ಅಡ್ಕಾರ್‌ನ ಗಂಗಮ್ಮಕ್ಕ
ಮೇರ್ಕಜೆನ ರಾಮಕ್ಕಕ್ಕ
ಮೋಂಟಡ್ಕದ ತೇಜಮ್ಮಕ್ಕ
ಪಡ್ದಂಬೈಲ್ ಕಮಲಕ್ಕ
ಮೂಣುಬೆಟ್ಟ್ ಮೀನಾಕ್ಷಕ್ಕ
ಗೌಡ್ರ ಹಿರಿ ತಲೆಗಾ
ಹೆಸ್ರ್ ಮಾಡ್ದ ಹೆಣ್ಣ್‌ಗಾ
ಸತ್ತ್ ಸೊರ್ಗ ಸೇರ್ದೊವು
ಸಮಾಜ ಸೇವೆ ಮಾಡ್ದೊವು
ರಾಜಕೀಯಲಿ ಮೆರ್ದೊವು
ಇವರ ನಾವು ಮರ್‍ಯೋಕುಟ್ಟೊ ?
ಇವರ ನಾವು ಮರ್‍ಯೋಕುಟ್ಟೊ ?

ಅವರ ದಾರಿಲಿ ನಾವು ನಡ್ಯೊಕು
ಮೇಲ್‌ಂದವು ನಮ್ಮ ನೋಡೊಕು
ನಮ್ಮ ಹಿರಿಮೆ ಕಂಡ್‌ದವು
ಯಾಗೋಳು ನಮ್ಮ ಹಸೊಕು
ಜಾತ್ಯವೆಲ್ಲ ನಮ್ಮ ನೋಡಿ
ಹಾಡಿ, ಹೊಗ್ಳಿ, ಹೆಮ್ಮೆ ಪಡೊಕು
ನಮ್ಮ ಮಕ್ಕ ಮುಂದೆ ಬಂದ್
ನಮ್ಮ ಹೆಸ್ರ್ ಉಳ್ಸೊಕು
ದಿನಾ ನಾವು ತಿಮ್ಮಪ್ಪ ದೇವ್ರ
ನೆನ್ಸಿ ಕೈನ ಮುಗ್ಯೋಕು.

*****

# ಉಪ್ಪಣ

ಬೆಸೆಗೆನ ಅಡಿಲಿ ಒಣ್ಂಗಿಕೆ ಹಾಕಿದ
ಉಪ್ಪಣ ತುಂಡಿತ್ತ್
ಚಿಬೆರಿಗೆ ಉಪ್ಪಣ ಹಾಕಿದ ಗೈಪು
ತಿಂಬಕೆ ಲಾಯ್ಕಿತ್ತ್.
        ಅಕ್ಕನು ಬಾವನು ಊಟದ ಹೊತ್ತಿಗೆ
        ನೆಂಟರ್ ಬಂದಿದ್ದೊ
        ಮಕ್ಕಳಿಗೆಲ್ಲಾ ತಿಂಬಕೆ ಉಂಡೆ
        ಚಕ್ಕುಲಿ ತಂದಿದ್ದೊ.
ಗೈಪುನ ಮಾಡಿಕೆ ಬೆಸೆಗೆನ ಮೇಲೆ
ಉಪ್ಪಣ ತುಂಡಿತ್ತ್
ಚಿಬೆರಿನ ಕಟ್ಟ್ ಮಡ್ಕೆ ಒಳಗೆ
ಕಾದ್ ಕೊಂಡಿತ್ತ್.
        ಚಿಬೆರಿನ ತೆಗ್ದ್ ಬೇಯಕೆ ಹಾಕಿ
        ಒಳಗೆ ಹೋಗಿದ್ದೆ
        ಉಪ್ಪಣ ತುಂಡುನ ನೀರ್‌ಲಿ ಹಾಕಿ
        ಕಡಿಯಕೆ ಕುದ್ದಿದ್ದೆ.
ಹುಳಿಮೆಣ್ಸ್, ಸಂಬಾರ, ಕಾಯೆನ ಹಾಕಿ
ಅರ್ರುನ ಕಡ್ಯತಿದ್ದೆ
ಬೇಗಾ ಆಕೆ ಕಲ್ಲ್‌ನ ಗುಂಡ್‌ನ
ಜೋರ್‌ಂದ ತಿರ್ಗ್ಸಿದ್ದೆ.
        ಅಟ್ಟಲಿ ಇದ್ದಾ ಕಂಠಾ ಕೊತ್ತಿ
        ಮೆಟ್ಟಲ್ ಇಳ್ಯತಿತ್ತ್
        ಕಳ್ಳ ಹೆಜ್ಜೆಲಿ ಒಳಗೆ ಬಂದ್
        ಅತ್ತಿತ್ತ ನೋಡ್ತಿತ್.

# ಐಯನ ಬಂಡೆ, ಯಾರ್ನ ಕರ್ರ್ಯೊದು

ಕೋರೆ ಹಲ್ಲ್‌ನ ರಕ್ಕಸ ಒಬ್ಬ
ನನ್ನ ತಿಂಬಕೆ ಬಾತಿತ್ತ್
ಉದ್ದದ ಉಗ್ರ್‌ನ ಬೆರ್ಳ್‌ನ ನೀಂಡಿ
ಕಣ್ಣ್‌ನ ತೊಂಡಿಕೆ ನೋಡ್ತಿತ್ತ್
ತಲೆಲಿ ಕೊಂಬು, ಉರ್ಳ್ಯವ ಕಣ್ಣ್‌ಗ
ಕರ್ಡ್ಡಿ ರೋಮಗ ಮೈಲಿದ್ದೊ
ತೊಡ್ಡೆನ ಕೆಬಿಗ ದಪ್ಪದ ಮೂಂಕು
ಮರದ ಹಾಂಗೆ ಕಾಲಿದ್ದೊ.
ಬೆಟ್ಟದ ಹಾಂಗೆ ನಡ್ಕಂಡ್ ಬಂದ್
ಹಕ್ಕಲೆ ಹಕ್ಕಲೆ ಬಾತಿತ್ತ್
ಹೆದ್ರಿಕಂಡ್ ನಾ ಹಿಂದೆ ಹೋಕನ
ಜೀವಾ ಹೋದಾಂಗಾಗ್ತಿತ್ತ್
ಗಡಗಡ ನಡ್ಗಿ ಹೆದ್ರಿ ಹೋಗಿ
ಲಂಗಲಿ ಉಚ್ಚೆ ಹ್ಯೊಕಂಡೆ
ಐಯ್ಯನ ಬಂಡೆ, ಯಾರ್ನ ಕರ್ರ್ಯೊದು ?
ಕಣ್ಣ್ ಮುಚ್ಚಿ ಮಲ್ಕಂಡೆ.
ಜೋರ್‌ಲಿ ಬೊಬ್ಬೆ ಹೊಡ್ದ್ ರಕ್ಕಸ
ಕುತ್ತಿಗೆ ಅಮ್ಕಿಕೆ ಬಂದೇ ಬುಡ್ತ್
ದೊಂಡೆನ ಪಸೆನು ಆರೇ ಹೋತ್
ಹೆದ್ರಿಕೆ ಆಗಿ ಉಸ್ರ್‌ನು ಕಟ್ಟಿತ್
ಯಾರೊ ನನ್ನ ಮೈ ಕೈ ಅಲ್ಲಿಸಿ
ಕರ್ದಾ ಸದ್ದಿಗೆ ಕಣ್ಣ್ ಬುಟ್ಟೆ
ಎದ್ರ್‌ಲಿ ನಿಂತಾ ಅವ್ವನ ನೋಡಿ
ಕಂಡದ್ ಕನ್ಸ್‌ಂತ ಗೊತ್ತಾತ್ ಬುಡಿ.

*****

# ಜೀವನ ಹೇಂಗೂ ಸಾಗಿತ್ತ್

ಕೆಸ್‌ರ್‌ನ ಗದ್ದೆಲಿ ಉಸ್‌ರ್‌ನ ಕಟ್ಟಿ
ನೇಜಿನ ಹೆಣ್ಮಕ್ಕ ನೆಡ್ತಿದ್ದೊ
ಕಿಡಿಂಜೋಳು ಸೂಂಡಿ,ಓ ಬೇಲೆ ಹಾಡಿ
ಕೂಲಿನ ಕೆಲ್ಸನ ಮಾಡ್ತಿದ್ದೊ. ॥೧॥

ಕಷ್ಟನು, ಸುಖನು ಒಂದೇ ಅವ್ಕೆ
ಹಗ್ಲ್, ಇರ್‍ಳ್ ದುಡ್ಯತಿದ್ದೊ
ನಾಳೆನ ಚಿಂತೆನೆ ಇಲ್ಲೇ ಅವ್ಕೆ

ಇಂದ್‌ನ ಕೆಲ್ಸ್ ಮಾಡ್ತಿದ್ದೊ. ॥೨॥
ದುಡ್ದರೆ ಉಟ್ಟು ಹೊಟ್ಟೆಗೆ ಹಿಟ್ಟ್
ಕೆಲ್ಸನೆ ಅವರಾ ಮನೆ ದೇವುರು
ಒಂದೇ ಸಮನೆ ದುಡ್ಡಾದಣುಕೆಲಿ
ಸುರ್‍ಯತಿತ್ತ್ ಅವರಾ ಮೈ ಬೆಗರ್ ॥೩॥

ಹೊಟ್ಟೆಗೆ ಎತ್ತಿರೆ ಬಟ್ಟೆಗೆ ಇಲ್ಲೆ
ಇದ್ದರ್ಲೆ ಸುಖ ಪಡ್ತಿದ್ದೊ
ಕೂಲಿನ ಮಾಡಿರು ಹಂಗಿಲ್ಲೆದೆನೇ
ಸೊತಂತ್ರ ಜೀವನ ನಡ್ಸ್‌ತ್ತಿದ್ದೊ. ॥೪॥

ಮೋಂದ್ರಿಗೆ ತಲೆನಾ ಇಸುದೇ ಗೊತ್ತು
ಸುಖದಾ ನಿದ್ದೆ ಬಾತಿತ್ತ್
ಲೋಕನೆ ಮರ್ತ್ ಕಡ್ಡ್‌ನ ನಿದ್ದೆಲಿ
ಜೀವನ ಹೇಂಗೂ ಸಾಗ್ತಿತ್ತ್ ॥೫॥

*****

# ಬಾಳೆಕುರ್ಲೈ

ರಾಮ ಗೌಡ ಗುಂಡಿತೆಗ್ದ್
ಬಾಳೆ ಕುರ್ಲೈ ನೆಟ್ಟಿತ್
ಈಟ್ ಹಾಕಿ ನೀರ್ ಹೊಯ್ದ್
ಪೊರ್ಲು ಅದರ ಸಾಕಿತ್
ಬಾಳೆ ಸುಳಿಗ ಮೇಲೆ ಬಂದ್
ಬಾಳೆ ಬೇಗ ಬೆಳ್ದತ್
ದಿನಾ ನೋಡಿ ರಾಮಗೌಡ
ಸಾಕಿಕಂಡ್ ಬಾತಿತ್

ಬಾಳೆ ಗೊನೆ ಮಾರಿ ನಂಗೆ
ಹೊಸ ಅಂಗಿ ಹೊಲ್ಸೊಕು
ಮೈ ತುಂಬ ಹಾಕಿಕಂಡ್
ಅದರ ನಾ ಮೆರ್ಸೊಕು.
ಎಂಬ ಕನ್ಸ್ ಕಂಡ್‌ದಂವ
ಮನ್ಸ್‌ಲೇ ಹಿಗ್ಗ್‌ತಿತ್ತ್
ದಿನಾ ಅದರ ನೆನ್ಸಿಕಂಡ್
ಕುಸಿಲೇ ಮೊಲ್ಗ್‌ತಿತ್ತ್

ಒಂದು ದಿನ ಹಡ್ಬೆದನ
ಬಾಳೆಗೆ ಬಾಯಿ ಹಾಕಿತ್
ರಾಮಗೌಡ ನೋಡಿ ಅದರ
ಹೊಡ್ದ್ ಕಾಲ್ ಮುರ್ದತ್
ಕೈಗೆ ಬಾಕನ ಬಾಯಿಗಿಲ್ಲೆ
ಕಂಡ ಕನ್ಸ್ ಹಾಳಾತ್
ಬೇಲಿ ಇಲ್ಲದೆ ನೆಟ್ಟಬಾಳೆ
ಹಡ್ಬೆದನದ ಪಾಲಾತ್.

*****

ಗಾಳಿಲಿ ಹಾರುವ ಪುಗ್ಗೆನ ನೋಡಿ
ಮಕ್ಕಾ ಬೇಕ್ಂತ ಮೊರ್ಡ್ತಿದ್ದೊ
ಬಳೆಗಳ ಇಸಿಕೆ ಹೆಣ್ಮಕ್ಕ ಎಲ್ಲಾ
ಕೈನ ನೀಂಡಿ ಕುದ್ರ್‌ತಿದ್ದೊ.

ಗಟ್ಟದ ಕಂಬ್ಳಿಗ, ಹೊದ್ಯ ಒಲ್ಲಿಗ
ದಾರಿ ಕರೆಲಿ ಮಾರ್‌ತಿದ್ದೊ
ಮಕ್ಕಳ ಉಡ್ಗೆಗ, ಬಣ್ಣದ ಸೀರೆಗ
ಕರ್ದ್ ಕರ್ದ್ ಕೊಡ್‌ತಿದ್ದೊ.

ತಿರ್ಗುವ ಕುದುರೆ, ತೂಂಗುವ ತೊಟ್ಟಿಲ್
ಚಂರೆ, ಚೊಂರೆ ಸದ್ದ್ ಮಾಡ್‌ತಿತ್ತ್
ಖರ್ಜೂರ, ಚರ್ಮುರಿ ಅಂಗ್ಡಿನು ಇತ್ತ್
ಕಬ್ಬೂನ ಹಾಲುನು ಕುಡ್ಯಕೆ ಇತ್ತ್.

ಬಣ್ಣದ ಸೀರೆಲಿ ಹೆಣ್ಮಕ್ಕ ಎಲ್ಲಾ
ಸಂತೆ ತುಂಬಾ ತಿರ್ಗ್‌ತಿದ್ದೊ
ಗೂಡೆಗ ಹೈದಂಗ ಗಡಿಬಿಡಿ ಮಾಡ್ಕಂಡ್
ಎಲ್ಲಾ ಕಡೆನೂ ಮೆರ್‍ಯತಿದ್ದೊ.

ಜಾತ್ರೆಲಿ ಜನಂಗಳ ನೂಕು ನುಗ್ಗಾಟ
ಎಲ್ಲಿ ನೋಡಿರು ಬರೇ ತಿರ್‍ಗಾಟ
ಪೋಲೀಸ್ ಜನಂಗೆಲ್ಲ ಸುತ್ತೋಳು ಇದ್ದೊ
ಕದ್ಯಕೆ ಕಳ್ಳಂಗ ಕಾಯ್‌ತಿದ್ದೊ

ಭಂಡಾರ ಬಾತಿತ್ತ್, ವಾಲಸಿರಿ ನಡ್ಯತಿತ್ತ್
ದೇವ್ರ ಬಲಿ ಸುತ್ತೂ, ಬಾತಿತ್ತ್
ಜನಂಗೆಲ್ಲ ಸೇರಿಕಂಡ್, ದೇವ್ರೊಟ್ಟಿಗೆ ಹೋಗ್ತಿದ್ದೊ
ಮೂರ್ಮಾರ್ ಸುತ್ತು ಬಾತಿದ್ದೊ.

ಉಪ್ಪಣ ಮೂರಿನ ಹುಡ್ಕಿಕಂಡ್
ಸುತ್ತೊಳು ತಿರ್ಗ್ತಿತ್ತ್
ಕಡೆಗೂ ಹುಡ್ಕಿತ್ ಉಪ್ಪಣ ತುಂಡುನ
ತಿಂಬಕೆ ನೋಡ್ತಿತ್ತ್.
        ಕೊತ್ತಿ ಅರಂಟುವ ಸದ್ದ್ ಕೇಳಿ
        ಕೋಲ್‌ನ ತಕಂಡೆ
        ಮೆಲ್ಲಂಗೆ ಹೋಗಿ ಕೊತ್ತಿ ತಲೆಗೆ
        ಕೋಲ್‌ಲಿ ಮೊಡಂಕಿದೆ.
ಓಡುವ ಭರಲಿ ಕಂಠಕೊತ್ತಿ
ನೀರ್‌ನ ಬೀಳ್ಸಿತ್
ಪೆಟ್ಟ್‌ನು ಅದರ ಕಾಲ್‌ಗೆ ತಾಂಗಿ
ಕುಂಟುನು ಆಗಿತ್ತ್.
        ಕುಂಟು ಕಾಲ್‌ನ ಕಂಠಾ ಕೊತ್ತಿ
        ಅಟ್ಟನ ಹತ್ತಿತ್
        ಕೊತ್ತಿನ ಓಡ್ಸುವ ಭರಲಿ ನಂಗೆ
        ಬೆಗರ್‌ನು ಇಳ್ದಿತ್ತ್.
ಉಪ್ಪಣ ತೆಗ್ದ್ದ್ ಚಿಬೆರಿನ ಒಟ್ಟಿಗೆ
ಅಳಗೆಲಿ ಬೇಸಿದೆ
ಅರ್ಪುನ ಹಾಕಿ ಕೊದ್ಯಕೆ ಬುಟ್ಟ್
ಗೈಪುನ ಇಳ್ಸಿದೆ.
        ಚಿಬೆರಿ ಉಪ್ಪಣ ತುಂಡುನ ಗೈಪುಲಿ
        ನೆಂಟ್ರ್‌ಗ ಉಂಡೆದ್ದೊ
        ಹಿಂಬೊತ್ತ್ ಆಕನ ಅಂಬೆರ್ಪು ಮಾಡಿ
        ಊರಿಗೆ ಹೊರ್ಟೋದೊ.

*****

# ಮುಳುಂಗುವ ಸೂರ್ಯ

ಹಿಂಬೋತ್ತು ಆಕನ ಪೊಡ್ವ ದಿಕ್ಕ್‌ಲಿ
ಮುಳುಂಗುವ ಸೂರ್ಯನ ನಾ ಕಂಡೆ
ಕಂಕಣೆ ಹಾಕಿದ ಕಂಚಿನ ಬಟ್ಲದ್
ಚಿನ್ನದ ಹಾಂಗೆ ಹೊಳ್ಯತಿತ್ತ್.

ಬಾಣಲಿ ಸೂರ್ಯನ ಕಂಡ್‌ದ್ ನಂಗೆ
ಸೊರ್ಗ ಸಿಕ್ಕಿದಂಗಾತ್
ರಂಗ್‌ನ ಅರಮನೆ ಬಾಣ ತುಂಬೆಲ್ಲಾ
ಕಿಚ್ಚಿನ ಉಂಡೆನ ನೋಡ್ದಾಂಗಾತ್.

ಕೆಂಪಾತ್ ಬಾಣ, ಕೆಂಪಾತ್, ಕೆಂಪಾತ್
ಕುರ್ದಿ ನೀರ್ನ ಚೆಲ್ಲಿದಂಗಾತ್
ನಿಗಿ ನಿಗಿ ಕೆಂಡನ ಕೆಂಪುನ ಬಣ್ಣಲಿ
ಓಕುಳಿ ಆಡ್ದಂಗೆ ಕಾಂಬತಿತ್ತ್.

ಎಷ್ಟ್ ನೋಡಿರು ಕಣ್ಣ್‌ಗೆ ಸಾಲದಾತ್
ಕಣ್ಣ್‌ನ ಪಾಪನ ಕಳ್ಕಂಡೆ
ಬಣ್ಣಾ ಬಣ್ಣದ ಬಾಣಲಿ ಸೂರ್ಯನ
ಕಣ್ತುಂಬ ನೋಡಿ ತುಂಬಿಕಂಡೆ.

ಕಂತುವ ಸೂರ್ಯನ ಪೊರ್ಲುನ ನೋಡಿಕೆ
ಇನ್ನೆರ್ಡ್ ಕಣ್ಣ್‌ಗ ಬೇಕಾಗಿತ್ತ್
ಮುಳುಂಗಿತ್ ಸೂರ್ಯ, ಮುಳುಂಗಿತ್, ಮುಳುಂಗಿತ್
ಸುತ್ತು ಮುತ್ತೋಳು ಕತ್ತಲೆ ಆತ್.

*****

# ಸುಳ್ಯ ಜಾತ್ರೆ

ಸುಳ್ಯದ ಜಾತ್ರ ಭಾರೀ ಗೌಜಿ
ಊರಿಗೆ ಊರೇ ಸೇರ್‌ತಿತ್ತ್
ತೇರ್‌ನ ಇರ್‌ಕ್, ದುರುಸು ಬಾಣಗ
ಬಾಣಲಿ ತುಂಬಾ ಹಾರ್‌ತಿತ್ತ್.

ಮಣಿಸರ್‌ಕ್, ಬಳೆಗ, ಗಿಲೀಟ್ ಸರಗ
ಸಂತೆಲಿ ತುಂಬಾ ಇರ್‌ತಿತ್ತ್
ಕೀಜಿನ ಪಾತ್ರೆ, ಸ್ಟೀಲ್‌ನ ಬಟ್ಲ್‌ಗ
ಹೋದಲೆಲ್ಲಾ ಕಾಂಬಾತಿತ್ತ್.

ಪ್ಲಾಸ್ಟಿಕ್ ಹೂಗ, ಬೊಂಬೆಗ ಎಲ್ಲಾ
ಕಣ್ಣ್‌ಗೆ ಎದ್ದ್ ಕಾಂಬತಿತ್ತ್
ಬಗೆ ಬಗೆ ತಿಂಡಿ-ತಿನ್ಸ್‌ಗ ಎಲ್ಲಾ
ಬಾಯಿಲಿ ನೀರ್ ತರ್‌ತಿತ್ತ್.

# ಪಾರಿಜಾತ

ಮೊಲ್ಗುವ ಕೋಣೆನ ಕಿಡಿಕೆನ ಪಕ್ಕಲಿ
ಪಾರಿಜಾತದ ಮರವೊಂದಿತ್ತ್
ಹಿಂಬೊತ್ ಆಕನ ಅರಳುವ ಹೂವದ್
ಗಮ ಗಮ ಪೊರ್ಮಳ ಬಾತಿತ್ತ್.

ಹೂವು ಅರ್ಳಿಕನ ಕೋಣೆ ತುಂಬೆಲ್ಲಾ
ಹರ್ಂಡ್‌ತಿತ್ತ್ ಅದರ ಗಮಲ್
ಸುಖದಾ ನಿದ್ದೆಲಿ ತೇಲಿ ಹೋಗ್ತಿದ್ದೆ
ಆಗ್ತಿತ್ತ್ ನಂಗೆ ಅಮಲ್

ಗಿಣಿನ ಕೊಕ್ಕುನ ಬಣ್ಣದ ತೊಟ್ಟು
ಬಿಳಿ ಐದೆಸಳ್‌ನು ಉಟ್ಟು
ಮರದಾ ತುಂಬೆಲ್ಲ ಹೂವರ್ಳಿಟ್ಟು
ನೋಡಿಕೆ ಅಗಲದ ಬೊಟ್ಟು

ಕತ್ತಲೆ ಆಕಾನ ನಕ್ಷತ್ರದಾಂಗೆ
ಮರದಾ ಮೇಲೆಲ್ಲ ಹೂವು
ಅರ್ಳಿದ ಹೂವುನ ಪೊರ್ಲಿಗೆ ಸೋತ್
ನೋಡಿವೆ ಅದರಾ ನಾವು

ಪಾರಿಜಾತನ ಮುಗುರುನ ಕೊಯ್ದ್
ಕಟ್ಟಿಕೆ ಆದೆ ಬಂಜ
ಸೂಜಿಲಿ ಸುರ್ದ್ ಮಾಲೆನ ಮಾಡಿಕೆ
ಆದುಲ್ಲೆ ನಾವ್ಗೆ ಬಂಜ

ಬೊಳ್ಪುಗೆ ನೋಡಿರೆ ಮರಬುಡಲೆಲ್ಲಾ
ಹರ್ಂಡಿದ ಹೂಗಳ ರಾಣಿ
ಹೂಗಳ ಹೆರ್ಕಿ ಮಾಲೆನ ಮಾಡಿ
ಮುಡ್ಕ್ಯೋದೆ ನಾವ್ಗೆಲ್ಲ ಕುಶಿ

*****

ಕಟ್ಟೆ ಹಕ್ಕಲೆ ಭೂತನು ಕೊಣ್ಯತಿತ್ತ್
ಗಗ್ಗರ ಕಾಲ್‌ನ ಹಂದಾಡ್ಸಿ
ಡೋಲ್‌ನ ಬೊಟ್ಟಿದ್ದೊ, ಪಾಡ್ದನ ಹೇಳ್ತಿದ್ದೊ.
ಬಂದಾ ಜನಂಗೆಲ್ಲ ನೋಡ್‌ತಿದ್ದೊ.

ದರ್ಶನ ಬಲಿಬಾತ್ ತೇರ್‌ನ ಹತ್ತಿತ್
ಜನಂಗೆಲ್ಲ ಕೈಮುಗ್ಡ್ ಬೇಡಿಕೊಂಡೊ
ಎರ್ಡ್ ಸಾಲ್‌ಲಿ ನಿಂತ ಜನಂಗೆಲ್ಲ
ತೇರ್‌ನ ಎಳ್ಕಂಡ್ ಹೊರ್ಟ್ಟೋದೊ.

ಬಟ್ಲ ಕಾಣಿಕೆ, ಹಣ್ಣ್ ಕಾಯಿ ಮಾಡಿ
ಗಂಧ–ಪ್ರಸಾದನ ಕೊಡ್ತಿದ್ದೊ
ಬೀದಿ ಬೀದಿಲಿ ಮೆರೋಣ್ಗೆ ಮಾಡಿ
ದೇವ್ರ ಜನಕೆಲ್ಲ ತೊರ್ಸ್‌ತೊದ್ದೊ

ಅನ್ನ ಸಂತರ್ಪಣೆ ನಡ್ಯತಿತ್ತ್
ಆನಂಗೆಲ್ಲ ಉಂಡ್ ಹೋಗ್‌ತಿದ್ದೊ
ಸುಳ್ಯದ ಜಾತ್ರೆನ ಪೊರ್ಲುನ ನೋಡಿ
ಭಾರೀ ಕುಸಿಲಿ ಹಿಗ್ಗತಿದ್ದೊ

ಜಾತ್ರೆನು ಮುಗ್ದತ್, ಸಂತೆನು ಹೋತ್
ಗೌಜಿನ ಜಾತ್ರೆ ಮುಗ್ದೋತ್
ನೆಂಟ್ರೆಲ್ಲ ಹೋದೊ ಮನೆ ಎಲ್ಲ ಖಾಲ್ಯಾತ್
ಜಾತ್ರೆನ ಕತೆನೇ ಹೀಂಗಾತ್ ॥೧೪॥

*****

## ಕಟ್ಟಕ್ಕೆ ಹೊರ್ಟ ಅತ್ತಿಗೆ

ಕಟ್ಟಕೆ ಹೊರ್ಟಾ ಅತ್ತಿಗೆ ತಲೆಲಿ
ಒಗ್ಯವ ಸೀರೆನ ಗಂಟಿತ್ತ್
ಕೈಲಿ ಹಿಡ್ದಾ ಮಡಕೆ ಒಳಗೆ
ಗಂಜಿನ ಅಗ್ಳ್ ಅಂಟಿತ್ತ್.

ತೊಳ್ಯದ ಮಡ್ಕೆನ ನೀರ್‌ಲಿ ಮುಳುಂಗಿಸಿ
ಸೀರೆನ ಕಲ್ಲ್‌ನ ಮೇಲಿಟ್ಟೊ
ನೀರ್‌ನ ಚೋಂಪಿ, ಸೀರೆನ ಬುಡ್ಸಿ
ಸಾಬಾನ್ ಹಾಕಿ ಉಜ್ಜಿಟ್ಟೊ.

ಮುಳುಂಗಿದ ಮಡ್ಕೆಲಿ ಮೊರ್‌ಂಟೆ ಮೀನ್‌ಗ
ಗಂಜಿ ಅಗ್ಳ್ ತಿಂಬತಿತ್ತ್
ಮಡ್ಕೆನ ತುಂಬಾ ಮೀನ್‌ಗ ತುಂಬಿ
ಕಣ್ಣ್‌ಗೆ ಹೊಡ್ದಾಂಗೆ ಕಾಂಬತಿತ್ತ್

ನೋಡಿದ ಅತ್ತಿಗೆ ಮಡ್ಕೆನ ಬಾಯಿಗೆ
ಬೆತ್ತದ ಕುಡ್ಪುನ ಮುಚ್ಚಿಟ್ಟೊ
ಮಡ್ಕೆನ ನೀರ್ಂದ ಎತ್ತಿ ಬೊಗ್ಗಿಸಿ
ಕಲ್ಲ್‌ನ ಮೇಲೆ ತೆಗ್ದಿಟ್ಟೊ

ಕುಡ್ಪುನ ತೆಗ್ದ್‌ದ್ ನೋಡಿರೆ ತರತರ
ಮೊರ್ಂಟೆ ಮೊನ್‌ಗ ಹೊರ್ಳ್ತಿದ್ದೊ
ಹುಳ್ಳಂಗೆ ಮೊನ್‌ನ ಸಾರ್ ಮಾಡಿಕೆ
ಇಂದ್‌ಗೆ ಸಾಕ್ಂತ್ ನೆನ್ಸ್ತಿದ್ದೊ.

ಸೀರೆನ ಒಗ್ದ್‌ದ್ ಅರಿಕೆ ಹಾಕಿ
ಕಲ್ಲ್‌ಲಿ ಮೊನ್‌ನ ಉಜ್ಜಿಟ್ಟೊ
ಪೊಳಜಿನ ತೆಗ್ದ್‌ದ್, ಪೊಟ್ಟೆನ ಪಿರಿಂಚಿ
ಮೊನ್‌ನ ಲಾಯ್ಕ್‌ಲಿ ತೊಳ್ದಿಟ್ಟೊ.

ತೊಳ್ದಾ ಮೊನ್‌ನ ಹಾಳೆಲಿ ಹಾಕಿ
ಕುಡ್ಪುನ ಅದ್ಕೆ ಮುಚ್ಚಿಟ್ಟೊ
ಗಂಜಿನ ಮಡ್ಕೆನ ಪೊರ್ಲುಲಿ ತೊಳ್ದ್
ಹರ್ಗಿದ ಸೀರೆನ ಮೊಡ್ಚಿಟ್ಟೊ

ಮಡ್ಕೆನ ಮೇಲೆ ಹಾಳೆನ ಇಸಿದ್
ತಲೆಲಿ ಮಡ್ಕೆನ ಹೊತ್ತ್ ಕೊಂಡೊ
ನೀರ್‌ನ ಗಂಟ್‌ನ ಕೈಲಿ ಹಿಡ್ಕಂಡ್
ಮನೆನ ಕಡೆಗೆ ಹೊರ್‍ಟ್ಟೊದೊ

*****

# ಕೂಸುನ ಬಂಜ

ತೊಟ್ಟ್‌ಲ್‌ಲಿದ್ದಾ ಕೂಸು ಮೊರ್ಟದೆ
ಅಯ್ಯೆಗೆ ಸಾಕಾತ್
ಹಾಲ್‌ನ ಕುಡ್ಸಿತ್ ಜೋಗುಳ ಹಾಡಿತ್
ಮೊರ್ಡುದು ನಿಲ್ಲುದುಲ್ಲೆ. ॥೧॥

ಕೂಸುನ ರಂಪನ ನೋಡಿದ್ ಅಯ್ಯೆಗೆ
ತಲೆನೇ ಕೆಟ್ಟೋತ್
ಸುಮ್ಮನೆ ಇರಿಕೆ ಏನ್ಮಾಡ್ದೀಗ
ಕೈಕಾಲ್ ಬಿದ್ದೋತ್ ॥೨॥

ಬೊಮ್ಮಣ ಮಾಡಿಕೆ ಪುರ್ಸೋತ್ತು ಇಲ್ಲೆ
ಕೆಲ್ಸನು ಬಾಕ್ಯುಟ್ಟು
ದೋಸೆಗೆ ಕಡ್ಯಕೆ ಅಕ್ಕಿನ ಆಗಳೆ
ನೀರ್‌ಲಿ ಹಾಕುಟ್ಟು ॥೩॥

ಮೊರ್ಟದೆ ಕೂಸು ದುಕ್ಕಿಸಿ, ದುಕ್ಕಿಸಿ
ಉಗ್ಗವ ಓಡಿ ಬಂದೊ
ತೊಟ್ಲ್‌ಂದ ಕೂಸುನ ನೇಚಿಕಂಡ್ ಬಂದ್
ಕಂಕಣೆ ಮೊಲ್ಗಿಸಿದೊ

ಕೂಸುನ ಕುಂಡೆಲಿ ಬಸುಂಡೆ ಎದ್ದುಟು
ನೋಡಿದ್ ಹೆದ್ರಿಕೊಂಡೊ
ತೊಟ್ಲ್‌ಲಿ ಹರ್ಗಿದ ಸೀರೆನ ಎಲ್ಲಾ
ತೆಗ್ದ್‌ದ್ ಕೊಡ್ಕಿದೊ ॥೪॥

ನೋಡಿದೆ ಅಲ್ಲೇ ಓಡಿ ಹೋಗ್ತಿತ್ತ್
ಕೆಂಪುನ ಕುಂದೊಳಿಂಜ
ಕಚ್ಚಿದ ಕೂಸುಗೆ ಉರ್‍ಯೋ ಬೇನೆನ
ತಡ್ಯಕೆ ಆದೆ ಬಂಜ.

*****

# ಕರ್ ಮೊಲೆ ಉಂಡತ್

ಕಂಚ್‌ಳ್ ಅದ್ದಾ ಹೆಣ್ಣ್ ಕರ್
ಬೊಳ್ಳಿನ ಬಿಚ್ಚಿತ್ತ್
ಓಡಿ ಹೋಗಿ ಬೊಮ್ಮಿ ದನದ
ಹಾಲ್‌ನ ಕುಡ್ದತ್ತ್.

    ಬೊಮ್ಮಿ ದನ ಕರ್‌ನ ಮೈನ
    ಲಾಯ್ಕ್‌ಲಿ ನೆಕ್ಕಿತ್
    ಮುಸುಂಡುನ ಗುದ್ದಿ, ಗುದ್ದಿ ಕರುನು
    ಹೊಟ್ಟೆನ ತುಂಬಿಸಿತ್.

ಚೊಂಬುನ ತಂದ್‌ದ್ ಅವ್ವ ನೋಡಿಕೆ
ಕರ್ ಮೊಲೆ ತಿಂದಾದೆ
ಐಯ್ಯನ ಬಂಡೆ ಏನ್ಮಾಡ್ದೀಗ
ಕುಡ್ಯಕೆ ಹಾಲಿಲ್ಲೆ.

    ಅವ್ವಂಗೆ ಸಿಟ್ಟ್ ಬಂದ್‌ದ್ ಕರ್‌ನ
    ಬೊಳ್ಳಿನ ಹಿಡ್ಕೊಂಡೊ
    ಎಳ್ಕೊಂಡೋಗಿ ಕಂಚ್‌ಳ್ ಒಳಗೆ
    ಬಿಗ್‌ದ್‌ದ್ ಕಟ್ಟಿದೊ.

ಚೊಂಬುನ ನೀರ್‌ನ ಕೆಚ್ಚಲಿಗಾಕಿ
ಪೊರ್ಲ್‌ಲಿ ತೊಳ್ಕೊಂಡೊ
ಕರ್ದೊ ಕರ್ದೊ, ಹಾಲ್‌ನ ಕರ್ದೊ
ಹಂಞನು ಬಾತಿಲ್ಲೆ.

    ಕರ್‌ಗೆದನಕೆ ಬೊಯ್ದ್ ಕಂಡ್
    ಅವ್ವ ಒಳಗೋದೊ
    ಇಂದ್‌ನ 'ಚಾ' ಕೆ ಹಾಲ್‌ನು ಇಲ್ಲೆ
    ಮನ್ಸ್‌ಲಿ ಗೊಣ್‌ಗಿದೊ.

*****

# ಅರೆಭಾಷೆ

ಅರೆಭಾಷೆಲಿ ಬರ್ಯಕೆ ಹೊರ್ಟರೆ
ಮನ್ಸಿಗೆ ಬಾಳ ಕುಸಿ ಆದೆ
ಬರ್ಯಕೆ ಸುರು ಮಾಡ್ದ ಮೇಲೆ
ಒಂದೊದಾಗಿ ನೆಂಪಾದೆ

ನಮ್ಮ ಬಾಷೆಲಿ ಬರ್ದನೆಂತ
ನಂಗೆ ಸುರುಗೆ ಗೊತ್ತಿತ್ಲೆ
ಬರ್ದಾಮೇಲಿ ಬರಿಯದೆ ನಂಗೆ
ಸುಮ್ಮನೆ ಕುದ್ರಿಕೆ ಆಗ್ತಿತ್ಲೆ

ಅರೆಭಾಷೆಲಿ ಬರ್ದ ನಂಗೆ
ಕನ್ನಡ ಭಾಷೆನೆ ಮರ್ರೊತ್ತುಗ್ಟು
ಮುಂದೆನ ಹಾಂಗೆ ಅಳ್ಕ್ ಅಂಜಿಕೆ
ಎಲ್ಲಾ ನನ್ನ ಬುಟ್ಟೊಗ್ಟು

ಭಾಷೆನ ಪೊರ್ಲುನ ಓದಿಕೆ ಕುದ್ದರೆ
ಹೊತ್ತೇ ಹೋದ್ ಗೊತ್ತಾದ್ಲೆ.
ತಿಂಬಕೆ–ಉಂಬಕೆ ಮರ್ತೇ ಹೋದೆ
ನಿದ್ದೆನು ಬೇಗ ಬಾದುಲ್ಲೆ.

ಬರ್ಯೊದು ಕಷ್ಟ ಅರೆಭಾಷೆಲಿ
ಒತ್ತು ಕೊಂಬುನ ನೋಡೋಕು
ಬರ್ದಾ ಮೇಲೆ ಓದಿದ್ ನಮ್ಮ
ಭಾಷೆನ ಪೊರ್ಲುನ ತಿಳ್ಸೋಕು

ಪಂಡ್‌ನ ಪದಗಳ ಹುಡ್ಕಿ ಹುಡ್ಕಿ
ಅರೆಭಾಷೆಲಿ ಬರ್ಯೋಕು
ಈಗನ ಮಕ್ಕಾ ಅದರ ಓದಿ
ನಮ್ಮಾ ಭಾಷೆನ ತಿಳ್ಸೋಕು.

ಅರೆಭಾಷೆನ ಕಲ್ಯೊದು ಸುಲಭ
ಬೇರೆ ಜನನು ಮಾತಾಡ್ವೆ
ಅರೆಭಾಷೇಲಿ ಮಾತಾಡ್ಕೆ ನಾವೇ
ಹಿಂದೆ ಮುಂದೆ ನೋಡಿವೆ

ಭಾಷೆಲಿ ನಾವು ಮೇಲೆ ಹೋಕು
ಭಾಷೆನ ನಾವು ಉಳ್ಸೋಕು
ಮನೆಮನೆ ಗೌಡ್ರ್‌ಗ ಅರೆಭಾಷೆ
ಬರ್ಯೋದರ ಕಳ್ಸೋಕು

ಅಕಾಡೆಮಿ ಮಾಡಿ ನಮ್ಮ ಭಾಷೆಗೆ
ಸ್ಥಾನ–ಮಾನ ಕೊಟ್ಟೊಳೊ
ಬರಹನ ಬರ್ದ್ ಬರಹಗಾರರ್
ಭಾಷೆನ ಗೌರವ ಉಳ್ಸೋಳೊ.

*****

ಮರಂದ ಇಳ್ದ್ ಗಳೆನ ತಕಂಡ್
ಕೊಕ್ಕೆನ ಬಿಚ್ಚಿದೊ
ಬಿಚ್ಚಿದ ಬೊಳ್ಳಿಗೆ ಹಣ್ಣ್‌ನ ರಸನ
ಹಿಂಡಿದ್ ಹಾಕಿದೊ ॥೫॥

ಕಾಡ್‌ನ ಪೊದೆಲಿ ಗಟ್ಟಿನ ಕೊಕ್ಕೆಗೆ
ಗೆಲ್ಲ್‌ನ ಹುಡ್ಕಿದೊ
ಸಿಕ್ಕಿದ ಗೆಲ್ಲ್‌ನ ಕತ್ತಿಲಿ ಕಡ್ದ್
ಕೊಕ್ಕೆನ ಮಾಡಿದೊ ॥೬॥

ಪದನಿದ ಬೊಳ್ಳಿಲಿ ಕೊಕ್ಕೆನಗಳೆಗೆ
ಬಿಗ್ದ್‌ದ್ ಕಟ್ಟಿದೊ
ಬೀಜದ ಮರಕೆ ಹತ್ತಿ ಬಾವ
ಕೊಯ್ಯಕೆ ಸುರು ಮಾಡ್ದೊ

ಬೀಜನ ಕೊಯ್ದ್ ಮುಗ್ದಾ ಮೇಲೆ
ಬಾವಾ ಕೆಳಗಿಳ್ದೊ
ಗಳೆನ ಹೆಗ್ಲ್‌ಲಿ ಕೋಸಿಕಂಡ್
ಮನೆಗೆ ಹೊರ್‌ಟ್ಟೋದೋ

ನಾನೂ ಅತ್ತಿಗೆ ಹೆರ್ಕಿದ ಬೀಜನ
ಕುಕ್ಕೆಗೆ ತುಂಬಿಸಿದೊ
ಬೀಜದ ಕುಕ್ಕೆನ ತಲೆಲಿ ಹೊತ್ತ್‌ಕಂಡ್
ನಾವೂನು ಮನೆಗೋದೊ.

*****

# ಮಲ್ಲಿಗೆ ಹೂವು

ಮಲ್ಲಿಗೆ ಬೊಳ್ಳಿಲಿ ಹೂವುಗ ತುಂಬಿದ್ದೊ
ನೋಡಿದ ಗೂಡೆ ಕೊಯ್ಯಕೆ ಹೊರ್ಟತ್
ಲಂಗದ ನೆರಿನ ಚಿಮ್ಮಿಸಿಕಂಡ್
ಕೈಲಿ ಕುಕ್ಕೆನ ಹಿಡ್ದತ್

ಹಾರ್ಕಂಡ್, ಕೊಣ್ಕಂಡ್ ಮಲ್ಲಿಗೆ ಬೊಳ್ಳಿನ
ಹಕ್ಕಲೆ ಬಂದ್ ನಿತ್ತತ್
ಕಣ್ತುಂಬ ನೋಡಿ ಕುಸಿಲಿ ಹೂವುನ
ಒಂದೊಂದೆ ಕೊಯ್ಯಕೆ ಸುರುಮಾಡ್ತ್

## ಸಿರ್ಮಾರೆ

ಪಾತೆಗ, ತುಂಬಿಗ ಹೂವುನ ಗಮಲಿಗೆ
ಸುತ್ತು ಮುತ್ತೋಳು ಹಾರ್‌ತಿದ್ದೊ
ಹೂವುನ ಮೇಲೆಲ್ಲ ಮುತ್ತುನ ಹಾಂಗೆ
ಬಿದ್ದಾ ಹನಿಗಾ ತೋರ್‌ತಿದ್ದೊ

ಬೆಳ್ತಕ್ಕಿ ಹುಗ್ಗೆ ಕರ್‌ಂಡಿದ ಹಾಂಗೆ
ಬೊಳ್ಳಿಲಿ ಹೂವು ಕಾಂಬತ್ತಿತ್ತ್
ಒಂದೊಂದೆ ಹೂಗಳ ಕೈಲಿ ಹಿಡ್ಕಂಡ್
ಮೆಲ್ಲಂಗೆ ಕೊಯ್ದ್ ತುಂಬಿಸಿತ್

ಗಮಗಮ ಗಮಲ್‌ನ ಮಲ್ಲಿಗೆ ಹೂನ
ಗುನು ಗುನು ಹೇಳ್ಕಂಡ್ ಕೊಯ್ಯುತ್ತಿತ್ತ್
ಕೊಯ್ದಷ್ಟ್ ಮುಗ್ಯತಿತ್ಲೆ, ಬುಟ್ಟಿನು ತುಂಬಿತ್ಲೆ
ಹುಡ್ಕಂಡ್,ಹುಡ್ಕಂಡ್ ಕೊಯ್ಯುತ್ತಿತ್ತ್

ಅಲ್ಲೊಂದು ಹೂವು, ಇಲ್ಲೊಂದು ಹೂವು
ಎಲೆನ ಮರೆಲಿ ನೋಡ್ತಿತ್ತ್
ಎಲೆನ ಸರ್‌ಸಿ, ಹೂನ ಕೊಯ್ದ್ ಹೂ
ಬುಟ್ಟಿನ ತುಂಬಾ ತುಂಬಿಸಿತ್

ತುಂಬಿದ ಮಲ್ಲಿಗೆ ಹೂವುನ ಕಂಡ್‌ದ್
ಕುಸಿಂದ ಗೂಡೆ ಕೊಣ್ದತ್
ಒಂದೊಂದೆ ಹೆಕ್ಕಿ ಮಾಲೆನ ಮಾಡಿ
ದೇವರ ಪೂಜೆಗೆ ತಕಂಡೋತ್॥

*****

# ಬೀಜದ ಕೊಚ್ಚಿಲಿ

ಬೀಜದ ಕೊಚ್ಚಿಲಿ ನಾನೂ ಅತ್ತಿಗೆ
ಬೀಜದ ಹೆರ್ಕ್ತಿದ್ದೊ
ಮರದ ಮೇಲೆ ಬಾವಾ ಗಳೆಲಿ
ಬೀಜನ ಕೊಯ್ತಿದ್ದೊ ॥೧॥

ಗೆಲ್ಲ್‌ನ ಅಲ್ಗಿಸಿ, ಅಲ್ಗಿಸಿ ಕೊಯ್ಯಕನ
ಹಣ್ಣ್‌ಗ ಬೀಳ್ತಿದ್ದೊ
ಹಣ್ಣ್‌ನ ಚಿರಿಂಟಿ ಬೀಜನ ತೆಗ್ದ್
ಕುಕ್ಕೆಗೆ ಹಾಕ್ತಿದ್ದೊ ॥೨॥

ಪೊದೆಲಿ ಸದೆಲಿ ಅಡ್‌ಂಗಿದ ಬೀಜನ
ನೋಡಿಕಂಡ್ ಹೆಕ್ತಿದ್ದೊ
ಹೆರ್ಕಿದ ಬೀಜನ ಕುಕ್ಕೆಗೆ ಹಾಕಿ
ಸುತ್ತೊಳು ಹುಡ್ಕ್‌ತಿದ್ದೊ ॥೩॥

ದೊಡ್ಡ ಗೆಲ್ಲ್‌ಗೆ ಗಳೆನ ಹಾಕಿ
ಜೋರ್‌ಂದ ಎಳ್ಯತಿದ್ದೊ
ಎಳ್ದಾ ಭರಲಿ ಗಳೆನ ಕೊಕ್ಕೆ
ಅರ್ಧಲಿ ಮುರ್ದೋತ್ ॥೪॥

# ಟಿಪ್ಪಣಿ

## ತಾವರೆ ಹೂಗ

ಮಾವನ ಮನೆನಾ ಕಟ್ಟಲಿ ತುಂಬಾ
ತಾವರೆ ಹೂವುಗಿದ್ದೊ
ಬೊಳ್ಪುಗೆ ಅರ್‌ಳಿ ಹಿಂಬೊತು ಆಕನ
ಮುಗುರು ಆಗ್ತಿದ್ದೊ ॥೧॥

ದಿನ ದಿನ ಹೋಗಿ ಕಟ್ಟದ ನೀರ್‌ಲಿ
ಕಾಲ್ ನ ಆಡ್ಸ್‌ತಿದ್ದೆ
ದಂಡೆಲಿ ಕುದ್ದ್ ಹೂಗಳ ನೋಡಿ
ಕುಸಿನ ಪಡ್ತಿದ್ದೆ ॥೨॥

# ಸರ್ಕ್ಮಾರೆ

ಕಟ್ಟಲಿ ತುಂಬಾ ತಾವರೆ ಹೂಗ
ಅರಳಿ ನಿಂತಿದ್ದೊ
ನೋಡಿಕೆ ಎರ್ಡ್ ಕಣ್ಣ್‌ಗ ಸಾಲದ್
ಮೊರ್ಳ್ ಮಾಡ್ತಿದ್ದೊ ॥೩॥

ತಾವರೆ ಹೂಗಳ ಪೊರ್ಲುನ ನೋಡಿ
ನನ್ನನ್ನೆ ಮರ್ಯತಿದ್ದೆ
ಮೀನ್‌ಗ ಬಂದ್‌ದ್ ಕಾಲಿಗೆ ಕಚ್ಚಿರೆ
ಬೆಚ್ಚಿ ಬೀಳ್ತಿದ್ದೆ. ॥೪॥

ತಾವರೆ ಹೂಗಳ ಕೊಯ್ಯಕೆ ನಾ
ನೀರ್‌ಗೆ ಇಳ್ಯತಿದ್ದೆ
ಕೈಗೆ ಸಿಕ್ಕದ ಹೂಗಳ ಮೆಲ್ಲಂಗೆ
ಗಳೆಲಿ ಎಳ್ಯತಿದ್ದೆ ॥೫॥

ಹೂಗಳ ಕೊಯ್ದ್ ದಂಟ್‌ಲಿ ಹಿಡ್ದ್
ಪೊರ್ಮಳ ಮೂಸ್ತಿದೆ
ಕಮ್ಮನೆ ಪೊರ್ಮಳ ಬಾಕನ ನಾನ್
ಕಣ್ಣ್‌ನ ಮುಚ್ಚಿದ್ದೆ.

ಮಾವನ ಮನೆನೆ ತಾವರೆ ಕಟ್ಟನ
ಯಾಗೊಳು ಮರ್ಯಕಿಲ್ಲೆ
ಮನ್ಸ್‌ಲಿ ಕನ್ಸ್ಲಿ ಅದರ ನೆಂಪುಗೆ
ಯಾವುದು ಬಾಕಿಲ್ಲೆ.

*****

# ಸರ್ಮಾಲೆ

ಅಟ್ಟಾದ ಮೇಲಿದ್ದ ಸರ್ಮಾಲೆ ದೀಪನ
ತಿಕ್ಕಿ ತೊಳ್ದ್ ಬೆಳ್ಳಂಗೆ ಮಾಡಿ
ಬಿಟ್ಟದ ಕೆಳಗಿದ್ದ ಕೊಂಡಿಗೆ ಕೋಸಿ
ಐದ್ ನೇಣೆಗಳ ಹೋಸ್ ತಿದ್ದೊ.

ಉದ್ದ ಸರ್ಪೋಳಿ ಮೇಲೊಂದು ಕೊಕ್ಕೆ ಇತ್ತ್
ಸರ್ಪೋಳಿ ನೊಡುಲಿ ಗಿಣಿ ಎದ್ದ್ ಕಾಂಬತಿತ್ತ್
ದೀಪಾನ ಹೋಸಿಕೆ ನೆಣ್ಐದ್ ಬೇಕಿತ್ತ್
ದೀಪಾಲಿ ತುಂಬಾ ಎಣ್ಣೆನು ಹಿಡ್ಯತಿತ್ತ್.

ನೊಡು ತಿಣ್ನ ಮೂಡ್‌ಲಿ ಕೊಕ್ಕೆನ ಕೋಸಿಕೆ
ಇರ್‌ತಿತ್ತ್ ಒಂದು ಉಂಗುರದ ಕೊಂಡಿ
ಸರ್ಮಾಲೆ ದೀಪಾನ ಹೋಸಿ ಆಕಾಕನ
ಅದರಾ ಬೊಳ್ಪೆಲ್ಲಾ ಕೋಣ್ ತುಂಬಾ

ಅರ್ಸಿಣ ಎಂಣ್‌ಗೆ, ಮೊದ್ರಂಗಿ ಶಾಸ್ತ್ರಕ್ಕೆ
ಚಪ್ಪಾರದಡಿಲೀ ಸರ್ಮಾಲೆ ತೂಗ್‌ತಿದ್ದೊ
ಪಚಾರಕ್ಕೂ ಬೇಕಿತ್ತ್, ಅಕ್ಕಿನ ಹಾಕಿಕೆ
ದೀಪಾನ ಬೊಳ್ಪುಗೆ ಕೈಮುಗ್ಯತಿದ್ದೊ.

ಪಂಡ್‌ನ ಕಾಲದ ಸರ್ಮಾಲೆ ದೀಪಾ
ಈಗನ ಕಾಲಲಿ ಬಾರೀ ಅಪ್ರೂಪ
ನೋಡಿಕೆ ಅದುನು ಪೊರ್ಲುನ ದೀಪ
ಅದರ ಹೆಸ್ರೇ ಸರ್ಮಾಲೆ ದೀಪ

*****